ದಾ: ಎ.ಪಿ. ಕರ್ಕಿ ಕರ್ಕಿ ಹೊನ್ನಾವರ ಯೋಜನೆ 5 ವರ್ಷಗಳಿಂದ ಸ್ತಗಿತವಾಗಿದೆ. ನೀರು ಕೊಡದೆ ಬಡ್ಡಿಕೊಡುವಂಥ ಪರಿಸ್ಥಿತಿ ಅಲ್ಲಿಗೆ, ನೀರು ಕೊಡದೆ ಬಡ್ಡಿ ವಸೂಲು ಮಾಡುವುದು ಸೂಕ್ತವೇನು?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನೇರವಾದ ವಿವರಗಳನ್ನು ಈಗ ನನ್ನಲ್ಲಿ ಇಲ್ಲ. ಇದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಈಗ ಮಾನ್ಯ ಹಣಕಾಸಿನ ಸಚಿವರು ಭಾರತ ಸಂವಿಧಾನ 205(1)ನೇ ಅನುಚ್ಛೇಧದ ಮೇರೆಗೆ 1994-95ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ ಬಗ್ಗೆ ಪ್ರಸ್ತಾಪವನ್ನು ಸಭೆಗೆ ಒಪ್ಪಿಸಲಾಗುವುದು.

ಶ್ರೀ ಸಿದ್ಧರಾಮೆಯ್ಯ (ಹಣಕಾಸಿನ ಮಂತ್ರಿ): ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 205(1)ನೇ ಅನುಚ್ಛೇಧದ ಮೇರೆಗೆ 1994-95ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ ಬಗ್ಗೆ ಪ್ರಸ್ತಾಪನೆಯನ್ನು ಸಭೆಗೆ ಒಪ್ಪಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಪ್ರಸ್ತಾವನೆಯನ್ನು ಮುಗಿಸಲಾಯಿತು

೧೯೯೪-೯೫ನೆಯ ಸಾಲಿನ

ಪೂರಕ ಅಂದಾಜುಗಳು

(ಅಂತಿಮ ಕಂತು)

(೧೯೯೫ನೇ ಮಾರ್ಚ್‌ತಿಂಗಳಲ್ಲಿ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಿದಂತೆ)

ಪ್ರಾರಂಭಿಕ ಟಿಪ್ಪಣಿ

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ''ಹೊಸ ಸೇವೆ''ಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧನ ಮಂಡಲದ ಮುಂದೆ ಮಂಡಿಸಲು ಭಾರತ ಸಂವಿಧಾನದ ೨೦೫ (೧) ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ.

೨. ಸಂವಿಧಾನದ ಸದರಿ ಉಪಬಂಧಕ್ಕನುಸಾರವಾಗಿ ೫೧೬.೫೬ ಕೋಟಿ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಇದು ೧೯೯೪-೯೫ರ ಅಂತಿಮ ಕಂತಿನ ಪೂರಕ ಅಂದಾಜುಗಗಳು. ಈ ಅಂದಾಜುಗಳು ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿವೆ-

(i) ವಿಧಾನ ಮಂಡಲದ ಮುಂದೆ ಡಿಸೆಂಬರ್ 1994ರಲ್ಲಿ ಮಂಡಿಸಲಾದ 1994-95ನೆಯ ಸಾಲಿನ ಎರಡನೆಯ ಕಂತಿನ ಅಂದಾಜುಗಳ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳು.

(ii) ಬೇಡಿಕೆಗಳಲ್ಲಿ ತೋರಿಸಿರುವ ಉದ್ದೇಶಗಳಿಗಾಗಿ ವರ್ಷದಲ್ಲಿ ಅಗತ್ಯವಿರುವ ಹೆಚ್ಚಿನ ಪೂರಕ ಅನುದಾನಗಳು ಮತ್ತು

(iii) ಲೆಕ್ಕ ಹೊಂದಾಣಿಕೆ ವಿಷಯಗಳು,

3. ಸಾದಿಲ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

4. ಪೂರಕ ಅಂದಾಜುಗಳಲ್ಲಿ ಒದಗಿಸಿರುವ 516.56 ಕೋಟಿ ರೂ. ಗಳಲ್ಲಿ 12.10 ರೂ. ಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ. 1.63 ಕೋಟಿ ರೂ. ಗಳು ಇತರೆ ಜಮೆಗಳಿಗೆ ಮತ್ತು 379.21 ಕೋಟಿ ರೂ. ಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ 123.63 ಕೋಟಿ ರೂಪಾಯಿಗಳು.

1994-95 ನೇಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು) (i)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು	ಮೊಬಲಗು (ಲಕ್ಷ ರೂಪಾಯಿಗಳಲ್ಲಿ) ಪ್ರಭೃತ ಸಂಖ್ಯೆ	ಪುರ್ಭೃತ	ಒಟ್ಟು	ಪುಟ ಸಂಖ್ಯೆ
1	2	3	4	5	6
1.	ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು) ರಾಜಸ್ವ ...	...	127.25	127.25	1
2.	ತೋಟಗಾರಿಕೆ ರಾಜಸ್ವ ...	...	102.45	102.45	2
3.	ಪಶುಸುಗೋಪನೆ ರಾಜಸ್ವ ...	...	133.50	133.50	3-4
	ಬಂಡವಾಳ ...	...	80.00	80.00	
5.	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು) ರಾಜಸ್ವ ...		1177.34	177.34	5-7
	ಬಂಡವಾಳ ...	...	2520.23	2520.23	
6.	ಗಣಿಗಳು ಮತ್ತು ಭೂ ವಿಜ್ಞಾನ ಬಂಡವಾಳ ...	...	30.00	30.00	8
7.	ಚಿಕ್ಕ ಪುಟ್ಟ ಉದ್ಯಮಗಳು ... ... ರಾಜಸ್ವ ...	...	0.01	0.01	9
	ಬಂಡವಾಳ ...	...	55.50	55.50	
9.	ಜವಳಿ ಉದ್ಯಮ ಮುಂತಾದವು ಬಂಡವಾಳ ...	...	289.01	289.01	10-11
10.	ಸಕ್ಕರೆ ಉದ್ಯಮಗಳು ಬಂಡವಾಳ ...	...	140.00	140.00	12
13.	ಉನ್ನತ ಶಿಕ್ಷಣ ... ... ರಾಜಸ್ವ	...	425.00	425.00	13
14.	ಯುವಜನ ಸೇವೆಗಳು ... ... ರಾಜಸ್ವ		4.94	4.94	14
15.	ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ರಾಜಸ್ವ ...		70.00	70.00	15
16.	ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ರಾಜಸ್ವ ...	...	104.00	104.00	16
17.	ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು ... ... ರಾಜಸ್ವ ...	...	100.00	100.00	17
19.	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು ... ... ರಾಜಸ್ವ ...	18.10	519.96	610.06	18-19
20.	ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು ... ಬಂಡವಾಳ		90.00	90.00	20
21.	ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರ ರಾಜಸ್ವ ...	...	1203.00	1203.00	21

23.	ಆಹಾರ ಮತ್ತು ನಿತ್ಯೋಪಯೋಗಿ					
	ಸಾಮಗ್ರಿಗಳು ಸರಬರಾಜು	ರಾಜಸ್ವ ...	0.44	88.04	88.48	22-23
		ಬಂಡವಾಳ ...	...	35.50	35.50	
24.	ಅರಣ್ಯ	ರಾಜಸ್ವ ...	...	553.00	553.00	24-25
25.	ರಾಜ್ಯದ ಅಬಕಾರಿ	ರಾಜಸ್ವ ...	...	153.92	153.92	26
	ಸಾರಿಗೆ ಸೇವೆಗಳು	ರಾಜಸ್ವ ...	...	21.25	21.25	27
28.	ಬಂದಿಖಾನೆ ಅಗ್ನಿಶಾಮಕ ಮತ್ತು					
	ಸೈನಿಕರ ಕಲ್ಯಾಣ ಮುಂತಾದವು	ರಾಜಸ್ವ ...	...	100.00	100.00	28
29.	ವಾರ್ತಾ ಮತ್ತು ಪ್ರಚಾರ	ರಾಜಸ್ವ ...	...	364.98	364.98	29-30
30.	ಪ್ರವಾಸೋದ್ಯಮ	ಬಂಡವಾಳ ...	...	10.00	10.00	31
31.	ವೈದ್ಯಕೀಯ ಶಿಕ್ಷಣ	ರಾಜಸ್ವ ...	...	120.00	120.00	32-33
32.	ಆರೋಗ್ಯ ಮತ್ತು ಕುಟುಂಬ					
	ಕಲ್ಯಾಣ ಸೇವೆಗಳು	ರಾಜಸ್ವ ...	...	50.11	50.11	34
34.	ನಗರಾಭಿವೃದ್ಧಿ	ರಾಜಸ್ವ ...	...	400.00	400.00	35
35.	ಸಣ್ಣ ನೀರಾವರಿ	ಬಂಡವಾಳ ...	...	1200.00	1200.00	36
36.	ಭಾರಿ ಮತ್ತು ಮಧ್ಯಮ ನೀರಾವರಿ	ಬಂಡವಾಳ ...	22,84	...	22.84	37
38.	ನ್ಯಾಯ ಪರಿಪಾಲನೆ	ರಾಜಸ್ವ ...	...	43.46	43.46	38
40.	ರಾಜ್ಯಪಾಲರು, ಮಂತ್ರಿಗಳು ಮತ್ತು					
	ಲೋಕಸೇವಾ ಆಯೋಗ	ರಾಜಸ್ವ ...	...	140.69	140.69	39
41.	ಸಚಿವಾಲಯ	ರಾಜಸ್ವ ...	...	22.37	22.37	40
42	ಜಿಲ್ಲಾಡಳಿತ	ರಾಜಸ್ವ ...	...	75.89	75.89	41
43.	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ ...	57.33	204.46	261.79	42-44
		ಬಂಡವಾಳ ...	...	500.00	500.00	
44.	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು	ರಾಜಸ್ವ ...	...	6.24	6.24	45
46.	ಲೋಕೋಪಯೋಗಿ ಕಾಮಗಾರಿ					
	(ನಿರ್ಮಾಣ ಹೊರತು)	ರಾಜಸ್ವ ...	...	740.00	740.00	46
47.	ಕಟ್ಟಡಗಳು	ಬಂಡವಾಳ ...	138.53	7.34	145.87	47-48
48.	ರಸ್ತೆ ಮತ್ತು ಸೇತುವೆಗಳು	ರಾಜಸ್ವ ...	...	35.00	35.00	49
50.	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ ...	...	6000.00	6000.00	50
		ಬಂಡವಾಳ ...	...	5000.00	5000.00	
51.	ಭೂ ಕಂದಾಯ ಇತ್ಯಾದಿ	ರಾಜಸ್ವ ...	...	75.55	75.55	51
52.	ಮುದ್ರಾಂಕಗಳು ಮತ್ತು ನೋಂದಣಿ	ರಾಜಸ್ವ ...	...	195.00	195.00	52
35.	ಸಹಕಾರ	ರಾಜಸ್ವ ...	...	1059.84	1059.84	53-54

57.	ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ	ರಾಜಸ್ವ ...	...	2000.00	2000.00	55
58	ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ	ರಾಜಸ್ವ ...	...	456.00	456.00	56
60.	ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	ರಾಜಸ್ವ ...	...	349.89	349.89	57-58
61.	ಮಹಿಳಾ ಮತ್ತು ಮಕ್ಕಳ ಕಲ್ಯಾಣ	ರಾಜಸ್ವ ...	...	100.57	100.57	59
	-ಬಡ್ಡಿ ಸಂದಾಯ	ರಾಜಸ್ವ ...	1065.89	...	1065.89	60
	- ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಅಂತರ ರಾಜ್ಯ ತೀರಿಕೆ	ಬಂಡವಾಳ ...	23000.00	...	23000.00	61
	ಜುಮ್ಲಾ	**ರಾಜಸ್ವ** ...	1141.76	17395.71	18537.47	
		ಬಂಡವಾಳ ...	23161.37	9957.58	33118.95	
	ಒಟ್ಟು ಜುಮ್ಲಾ	...	24303.13	27353.29	51656.42	

1994-95ನೆಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯೋಚನೆಯ ಕ್ರಮಾಂಕ 1

ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	20.00	22591.38	22611.38
		ಬಂಡವಾಳ	...	1395.51	1395.51
	ಪೂರಕ	ರಾಜಸ್ವ	...	56.71	56.71
		ಬಡಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	127.25	127.25
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಪ್ರಭೃತ/ಪುರಸ್ಕೃತ	ಹಣದ ಅಗತ್ಯತೆ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2402-ಭೂ ಸಾರ ಮತ್ತು ಜಲ ಸಂರಕ್ಷಣೆ	102 ಭೂಸಾರ ಸಂರಕ್ಷಣಾ ಯೋಜನೆಗಳು	05-ನದಿ ಕಣಿವೆ ಯೋಜನೆಗಳ ಜಲಾನಯನ ಪ್ರದೇಶದಲ್ಲಿ ಭೂ ಸಾರ ಸಂರಕ್ಷಣೆಗೆ ಕೇಂದ್ರ ಪುರಸ್ಕೃತ ಯೋಜನೆ		127.25	...
		ಒಟ್ಟು		**127.25**	...

ವಿವರಣಾತ್ಮಕ ಟಿಪ್ಪಣಿ

ನದೀ ಕಣಿವೆ ಯೋಜನೆಗಳ ಜಲಾನಯನ ಪ್ರದೇಶದಲ್ಲಿ ಭೂಸಾರ ಸಂರಕ್ಷಣೆಗೆ ಕೇಂದ್ರ ಪುರಸ್ಕೃತ ಯೋಜನೆ ಸಂಬಂಧಿಸಿದ ಕಾಮಗಾರಿಗಗಳ ಮೇಲಣ ವೆಚ್ಚವನ್ನು ಭರಿಸಲು ಮೊದಲು ರಾಜಸ್ವ ಶೀರ್ಷಿಕೆಯಡಿಯಲ್ಲಿ ಪ್ರತಿವರ್ಷವೂ ಆಯವ್ಯಯ ಅವಕಾಶವನ್ನು ಕಲ್ಪಿಸಿ ಅಂತಿಮವಾಗಿ ಆರ್ಥಿಕ ವರ್ಷದ ಕೊಡೆಯಲ್ಲಿ ಮಹಾಲೇಖಪಾಲರು ಪುಸ್ತಕ ಹೊಂದಾಣಿಕೆ ಮೂಲಕ ಬಂಡವಾಳ ಶೀರ್ಷಿಕೆಗೆ ಅಂತಿಮವಾಗಿ ವರ್ಗಾಯಿಸುವರು, 1992-93ನೇ ಸಾಲಿನಲ್ಲಿ ರೂ. 1.27, 24-367-00 ಹೆಚ್ಚುವರಿ ಮೊಬಲಗನ್ನು ಮಹಾಲೇಖಪಾಲರಿಂದ ರಾಜಸ್ವ ಶೀರ್ಷಿಕೆಯಿಂದ ಬಂಡವಾಳ ಶೀರ್ಷಿಕೆಗೆ ವರ್ಗಾವಣೆ ಮಾಡಲಾಗಿದೆ. ಈ ತಪ್ಪು ವರ್ಗೀಕರಣವನ್ನು ಸರಿಪಡಿಸಲು ಪುಸ್ತಕ ಹೊಂದಾಣಿಕ ಮಾಡಲು ರೂ. 127.25 ಲಕ್ಷಗಳ ಅವಶ್ಯಕತೆಯಿದೆ. ಇದು ಕೇವಲ ಪುಸ್ತಕ ಹೊಂದಾಣಿಕೆಯಾಗಿರುವುದರಿಂದ ನಗದು ಹಣ ಹೊರಗೆ ಹೋಗುವುದಿಲ್ಲ.

ಅಭಿಯಾಚನೆಯ ಕ್ರಮಾಂಕ 2

ತೋಟಗಾರಿಕೆ

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	5.00	4985.09	4990.14
		ಬಂಡವಾಳ	...	...	...
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಆಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	102.45	102.45
ಬಂಡವಾಳ	...	...	...

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಕೇಂದ್ರ	ಹಣದ ಅಗತ್ಯತೆ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2401-ಸಸ್ಯ ಸಂಗೋಪನೆ	108-ವಾಣಿಜ್ಯ ಬೆಳೆಗಳು	2. ತೋಟಗಾರಿಕೆ ಇಲಾಖೆ 35. ತೆಂಗು ಅಭಿವೃದ್ಧಿ ಮಂಡಳಿ ನೆರವಿನೊಂದಿಗೆ ತೆಂಗು ಹಿಡುವಳಿಗಳ ಉತ್ಪಾದನೆಯನ್ನು ಉತ್ತಮಪಡಿಸಲು ಸಮಗ್ರ ತೆಂಗು ಬೇಸಾಯ ಯೋಜನೆ (ಶೇಕಡಾ 100 ರಷ್ಟು ಸಹಾಯ)	...	1	73.00 ...
	119- ತೋಟಗಾರಿಕೆ ಮತ್ತು ತರಕಾರಿ ಬೆಳೆಗಳು	4. ಬೇಸಾಯ ಕ್ಷೇತ್ರಗಳು ಮತ್ತು ಸಸ್ಯ ಕ್ಷೇತ್ರಗಳ ಅಭಿವೃದ್ಧಿ	...	2	1.11 ...
	191-ಸ್ಥಳೀಯ ಸಂಸ್ಥೆಗಳು ನಿಗಮಗಳು ಇತ್ಯಾದಿಗಳಿಗೆ ಸಹಾಯ	2. ಜಿಲ್ಲಾ ಪರಿಪತ್ತು ಮತ್ತು ಮಂಡಳ ಪಂಚಾಯತ್‌ಗಳು (ತೋಟಗಾರಿಕೆ ಇಲಾಖೆ)			
		03. ಗೇರು ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ		3	28.34 ...
		ಒಟ್ಟು			102.45 ...

ವಿವರಣಾತ್ಮಕ ಟಿಪ್ಪಣಿ

ಬಾಬ್ತು ಸಂಖ್ಯೆ 1- ತೆಂಗು ಅಭಿವೃದ್ಧಿ ಮಂಡಳಿಯ 1994-95ನೇ ಸಾಲಿನಲ್ಲಿ ರೂ. 73.00 ಲಕ್ಷಗಳ ವೆಚ್ಚದಲ್ಲಿ ತೆಂಗು ಹಿಡುವಳಿಗಳಲ್ಲಿನ ಉತ್ಪಾದನೆಯನ್ನು ಉತ್ತಮಗೊಳಿಸಲು ಸಮಗ್ರ ತೆಂಗು ಬೇಸಾಯ ಯೋಜನೆಯೊಂದನ್ನು ಮಂಜುರು ಮಾಡಿತು. ಈ ಯೋಜನೆಗೆ ತೆಂಗು ಅಭಿವೃದ್ಧಿ ಮಂಡಳಿಯು ಶೇಕಡಾ 100 ರಷ್ಟು ನೆರವನ್ನು ನೀಡಲಿದೆ. ಆಯವ್ಯದಲ್ಲಿ ಈ ಉದ್ದೇಶಕ್ಕೆ ಹಣವನ್ನು ಒದಗಿಸಿಲ್ಲವಾದ್ದರಿಂದ ರೂ. 3.00 ಲಕ್ಷವನ್ನು ಬೇಡಿಕೆಯಲ್ಲಿ ಸೇರಿಸಿದೆ.

ಬಾಬ್ತು ಸಂಖ್ಯೆ 2 ಮತ್ತು 3- ರೂ. 157.79 ಲಕ್ಷಗಳ ವೆಚ್ಚದಲ್ಲಿ ಕೇಂದ್ರ ಪುರಸ್ಕೃತ ಸಮಗ್ರ ಗೇರು ಅಭಿವೃದ್ಧಿ ಯೋಜನೆಯನ್ನು 1994-95ನೇ ಸಾಲಿನಲ್ಲಿ ಮುಂದುವರೆಸಲು ಅನುಮೋದನೆಯನ್ನು ನೀಡಲಾಗಿದೆ, ಆಯವ್ಯದಲ್ಲಿ ಈ ಉದ್ದೇಶಕ್ಕಾಗಿ 1994-95ನೇ ಸಾಲಿನಲ್ಲಿ 125.34 ಲಕ್ಷವನ್ನು ಈ ಯೋಜನೆಗೆ ಒದಗಿಸಲಾಗಿದೆ. ಆದ್ದರಿಂದ ಬಾಕಿ ಮೊಬಲಗಾದ ರೂ. 29.45 ಲಕ್ಷಗನ್ನು ಬೇಡಿಕೆಯಲ್ಲಿ ಸೇರಿಸಿದೆ.

1994 - 95 ನೆಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)
ಅಭಿಯಾಚನೆಯ ಕ್ರಮಾಂಕ 3
ಪಶುಸಂಗೋಪನೆ

(ಲಕ್ಷ ರೂ. ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	5.00	8909.92	8914.92
		ಬಂಡವಾಳ	...	...	...
	ಪೂರಕ	ರಾಜಸ್ವ	...	100.00	100.00
		ಬಂಡವಾಳ	...	200.00	200.00

1995-96ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	133.50	133.50
ಬಂಡವಾಳ	...	80.00	80.00

27 MAR 1995

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಬಾಬು ಸಂಖ್ಯೆ	ಹಣದ ಅಗತ್ಯತೆ ಲಕ್ಷ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2403 ಪಶು ಸಂಗೋಪನೆ	105 ಹಂದಿ ಅಭಿವೃದ್ಧಿ	07 ಸಮಗ್ರ ಹಂದಿ ಅಭಿವೃದ್ಧಿ ಕೇಂದ್ರ ಪುರಸ್ಕೃತ ಯೋಜನೆ	1	13.50	...
2404 ಡೇರಿ ಅಭಿವೃದ್ಧಿ	191 ಸಹಕಾರಿ ಮತ್ತು ಇತರ ಸಂಸ್ಥೆಗಳಿಗೆ ನೆರವು	1 ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಸಂಘ ನಿಯಮಿತ			
		12 ಡೆಂಪ್ರೋ ಡೇರಿಯನ್ನು ಕೊಳ್ಳುವ ಬಗ್ಗೆ	2	120.00	...
6404 ಡೇರಿ ಅಭಿವೃದ್ಧಿಗೆ ಸಾಲಗಳು	195 ಡೇರಿ ಸಹಕಾರಿ ಸಂಘಗಳಿಗೆ ಸಾಲಗಳು	01 ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಒಕ್ಕೂಟ	3	80.00	...
	ಒಟ್ಟು	ರಾಜಸ್ವ	...	133.50	...
		ಬಂಡವಾಳ	...	80.00	...

ವಿವರಣಾತ್ಮಕ ಟಿಪ್ಪಣಿ

ಬಾಬುಸಂಖ್ಯೆ-1. ಕೇಂದ್ರ ಸರ್ಕಾರವು 1992-93ನೇ ಸಾಲಿನಲ್ಲಿ ರಾಜ್ಯ ಹೆಸರಘಟ್ಟ, ಕೊಡಿಗೆ ಮತ್ತು ಕೊಯಿಲಗಳಲ್ಲಿರುವ ಹಂದಿ ತಳಿ ಕ್ಷೇತ್ರಗಳನ್ನು ಬಲಪಡಿಸುವ ಸಲುವಾಗಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರೂ. 18.00 ಲಕ್ಷಗಳ ಯೋಜನೆಯೊಂದನ್ನು ಮಂಜೂರು ಮಾಡಿ ಮೊದಲನೇ ಕಂತಾಗಿ ರೂ. 13.50 ಲಕ್ಷಗಳನ್ನು ಬಿಡುಗಡೆ ಮಾಡಿತ್ತು ಈ ಹಣವನ್ನು ಆ ವರ್ಷ ಮತ್ತು ತದನಂತರದ ವರ್ಷದಲ್ಲಿ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಪ್ರಸಕ್ತ ವರ್ಷದಲ್ಲಿ ಈ ಮೊಬಲಗನ್ನು ಬಿಡುಗಡೆ ಮಾಡಲು ಅವಶ್ಯವಿರುವ ಮೊಬಲಗನ್ನು ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ-2 ಮತ್ತು 3 ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಒಕ್ಕೂಟವು ಟೆಂಪೋ ಡೇರಿಯನ್ನು ರೂ. 985.50 ಲಕ್ಷಗಳಿಗೆ ಖರೀದಿ ಮಾಡಿದೆ. ರಾಷ್ಟ್ರೀಯ ಡೇರಿಯನ್ನು ರೂ. 985.50 ಲಕ್ಷಗಳಿಗೆ ಖರೀದಿ ಮಾಡಿದೆ. ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಯು ''ಅಪರೇಷನ್ ಫ್ಲಡ್-3 ''ಕಾರ್ಯಕ್ರಮದ ಅಡಿಯಲ್ಲಿ ರೂ. 585 50 ಲಕ್ಷಗಳ (ಶೇ. 70 ಭಾಗ ಸಾಲ ಮತ್ತು ಶೇ. 30 ಭಾಗ ಅನುದಾನ) ಆರ್ಥಿಕ ಸಹಾಯವನ್ನು ನೀಡಲು ಒಪ್ಪಿಗೆ ನೀಡಿದೆ. ಬಾಕಿ ಮೊಬಲಗಾದ ರೂ. 400.00 ಲಕ್ಷವನ್ನು ರಾಜ್ಯ ಸರ್ಕಾರವು ಪಾವತಿ ಮಾಡಬೇಕಾಗಿದೆ. ತುರ್ತು ನಿಮಿತ್ತ ರಾಜ್ಯ ಡೇರಿ ಅಭಿವೃದ್ಧಿ ಮಂಡಳಿಯು ರಾಜ್ಯ ಸರ್ಕಾರದ ಪರವಾಗಿ ರೂ. 400.00 ಲಕ್ಷವನ್ನು ಪಾವತಿ ಮಾಡಿದ್ದು ಈ ಮೊಬಲಗನ್ನು ಮಂಡಳಿಗೆ ಮರುತುಂಬಿ ಕೊಡಬೇಕಾಗಿದೆ. ರಾಜ್ಯ ಸರ್ಕಾರದ ಕೆ.ಎಂ.ಎಫ್.ಗೆ ಡೇರಿ ಅಭಿವೃದ್ಧಿ ಮಂಡಳಿಯ ಪ್ರಮಾಣದಂತೆ (ಶೇ 70 ಭಾಗ ಸಾಲ ಮತ್ತು ಶೇ. 30 ಭಾಗ ಅನುದಾನ) ರೂ. 40.00 ಲಕ್ಷಗಳನ್ನು ನೀಡಲು ನಿರ್ಧರಿಸಿದೆ. ಈಗಾಗಲೇ ರೂ. 200.00 ಲಕ್ಷವನ್ನು ಕೆ.ಎಂ.ಎಫ್.ಗೆ ಸಾಲವಾಗಿ ಬಿಡುಗಡೆ ಮಾಡಿದ್ದು, ಬಾಕಿ ಸಾಲದ ಮೊತ್ತವಾದ ರೂ. 80.00 ಲಕ್ಷ ಹಾಗೂ ಅನುದಾನದ ಮೊತ್ತವಾದ ರೂ. 120.00 ಲಕ್ಷವನ್ನು ಬೇಡಿಕೆಯಲ್ಲಿ ಸೇರಿಸಿದೆ.

1994 - 95 ನೆಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯಾಚನೆಯ ಕ್ರಮಾಂಕ 5

ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

(ಜವಳಿ ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು)

(ಲಕ್ಷ ರೂ. ಗಳಲ್ಲಿ)

				ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	...	3395.33	3395.33
		ಬಂಡವಾಳ	...	...	1691.00	1691.00
	ಪೂರಕ	ರಾಜಸ್ವ	...	...	...	...
		ಬಂಡವಾಳ	...	...	351.66	351.66

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು.

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	1177.34	1177.34
ಬಂಡವಾಳ	...	2520 23	2520 23

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಪ್ರಶ್ನೆ ಸಂಖ್ಯೆ	ಹಣದ ಅಗತ್ಯತೆ ಲಕ್ಷ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2852-ಉದ್ಯಮಗಳು ವಲಯ ಮತ್ತು 07-ದೂರ ಸಂಪರ್ಕ ಮತ್ತು ವಿದ್ಯುತ್ ಉದ್ಯಮಗಳು	190-ಸಾರ್ವಜನಿಕ ಇತರ ಉದ್ಯಮ ಗಳಿಗೆ ಸಹಾಯ	01-ಕಿಯೋನಿಕ್ಸ್	1	…	53.80
08-ನಿತ್ಯೋಪಯೋಗಿ ಸಾಮಗ್ರಿ ತಯಾರಕ ಉದ್ಯಮಗಳು	215-ಕಾಗದ ಮತ್ತು ವಾರ್ತಾ ಮುದ್ರಣದ ಕಾಗದಗಳು	1-ಮೈಸೂರು ಕಾಗದ ಕಾರ್ಖಾನೆ ಭದ್ರಾವತಿ …			…
	ಸಹಾಯ ಧನ	01-ವರ್ತಮಾನ ಪತ್ರಿಕೆಗಳಿಗೆ … 2	1123.54	…	
4859-ದೂರ ಸಂಪರ್ಕ ಮತ್ತು ವಿದ್ಯುತ್ ಉದ್ಯಮಗಳ ಮೇಲಣ ಬಂಡವಾಳ ವೆಚ್ಚ					

1	2	3	4	5	6
02-ಎಲೆಕ್ಟ್ರಾನಿಕ್ಸ್ ವಲಯ ಮತ್ತು ಇತರ ಉದ್ದಿಮೆ ಗಳಲ್ಲಿ ವಿನಿಯೋಗ	190-ಸಾರ್ವಜನಿಕ 211-ಬಂಡವಾಳ ಹೂಡಿಕೆ ...	01-ಕಿಯೋನಿಕ್ಸ್ 3	54.20	...	
4860-ಗ್ರಾಹಕವಸ್ತು ಗಳ ಉದ್ಯಮಗಳ ಮೇಲಣ ಬಂಡವಾಳ ವೆಚ್ಚ	190-ಸಾರ್ವಜನಿಕ ವಲಯ ಮತ್ತು ಇತರ ಉದ್ದಿಮೆ ಗಳಲ್ಲಿ ಬಂಡವಾಳ ಹೂಡಿಕೆ	01-ಮೈಸೂರು ಕಾಗದ ಕಾರ್ಖಾನೆಯಲ್ಲಿ ಬಂಡವಾಳ ಹೂಡಿಕೆ ...	4	1400.00	...
05-ಕಾಗದ ಮತ್ತು ವಾರ್ತಾ ಮುದ್ರಣ ಕಾಗದಗಳು					
858-ಇಂಜಿನಿಯರಿಂಗ್ ಉದ್ಯಮಗಳಿಗೆ ಸಾಲಗಳು ಗಳಿಗೆ ಸಾಲಗಳು	190-ಸಾರ್ವಜನಿಕ ವಲಯ ಮತ್ತು ಇತರ ಉದ್ದಿಮೆ	2-ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆಗೆ ಸಾಲಗಳು ...	5	984.81	...
01-ವಿದ್ಯುತ್ ಇಂಜಿನಿಯರಿಂಗ್ ಉದ್ಯಮಗಳು					

6860-ಗ್ರಾಹಕವಸ್ತುಗಳ ಉದ್ಯಮಗಳಿಗೇ ಸಾಲಗಳು	212-ಸಾಬೂನುಗಳು	1-ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್				
60-ಇತರೆ		02-ಮಾರಾಟ ತೆರಿಗೆ ರಿಯಾಯಿತಿ ವಿರುದ್ಧ ಸಾಲಗಳು	...	6	81.22	
		ರಾಜಸ್ವ			1123.54	53.80
		ಬಂಡವಾಳ			2520.23	

ಬಾಬು ಸಂಖ್ಯೆ : 1 ಮತ್ತು 9 : ಕರ್ನಾಟಕ ರಾಜ್ಯ ಸಣ್ಣ ಪ್ರಮಾಣದ ಉದ್ಯಮಗಳ ಅಭಿವೃದ್ಧಿ ನಿಗಮವು ತನಗೆ ಸೇರಿದ್ದ 9.03 ಎಕರೆ ಭೂಮಿಯನ್ನು 1986ರಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ ಎಲೆಕ್ಟ್ರಾನಿಕ್ಸ್ ಟೆಸ್ಟ್ ಅಂಡ್ ಡೆವಲಪ್‌ಮೆಂಟ್ ಸೆಂಟರ್ (ಇಟಿಡಿಸಿ), ಡಿಪಾರ್ಟ್‌ಮೆಂಟ್ ಎಲೆಕ್ಟ್ರಾನಿಕ್ಸ್, ಭಾರತ ಸರ್ಕಾರ ಇವರಿಗೆ ಉಚಿತವಾದ ಮಂಜೂರು ಮಾಡಿತ್ತು. ಹಣದ ಮುಗ್ಗಟ್ಟಿನಿಂದಾಗಿ, ಇಟಿಡಿಸಿ ಸಂಸ್ಥೆಯು ಈ ಭೂಮಿಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ. ಪ್ರಸ್ತುತ ಈ ಸಂಸ್ಥೆಯ ಕಿಯೋನಿಕ್ಸ್ ಸಂಸ್ಥೆಗೆ ಸೇರಿದ ಕಿಯೋನಿಕ್ಸ್ ಭವನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೆಎಸ್‌ಎಸ್‌ಐಡಿಸಿಗೆ ಸೇರಿದ ಭೂಮಿಯಲ್ಲಿ ತನ್ನದೇ ಆದ ಕಟ್ಟಡವನ್ನು ಹೊಂದಲು ಸಾಧ್ಯವಾಗದ ಕಾರಣ, ಇಟಿಡಿಸಿ ಸಂಸ್ಥೆಗೆ ಕಿಯೋನಿಕ್ಸ್‌ಗೆ ಸೇರಿದೆ 2 ಎಕರೆ ಭೂಮಿಗೆ ಹೊಂದಿಕೊಂಡಂತೆ, ಕಿಯೋನಿಕ್ಸ್ ಭವನವನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಕೇಳಿತ್ತು. ಇಟಿಡಿಸಿ ಸಂಸ್ಥೆಯು ಹಿಂತಿರುಗಿಸಿದ 6.03 ಎಕರೆ ಭೂಮಿಯನ್ನು ತನಗೆ ನೀಡುವಂತೆ ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆಯು ಕೇಳಿರುತ್ತದೆ. ಈ ಮೇಲಿನ ಕಾರಣಗಳಿಂದಾಗಿ, ಈ ಕೆಳಕಂಡ ತೀರ್ಮಾನಗಳನ್ನು ಸರ್ಕಾರವು ತೆಗೆದುಕೊಂಡಿರುತ್ತದೆ.

ಅ) ಇಟಿಡಿಸಿ ಸಂಸ್ಥೆಯು ವಶಪಡಿಸಿಕೊಂಡಿದ್ದ 2 ಎಕರೆ ಭೂಮಿಗೆ ಹೊಂದಿಕೊಂಡು ಇರುವ ಕಿಯೋನಿಕ್ಸ್ ಭವನವನ್ನು ಉಚಿತವಾಗಿ ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಇಲಾಖೆಗೆ ವರ್ಗಾವಣೆ ಮಾಡುವುದು.

ಇಟಿಡಿಸಿ ಸಂಸ್ಥೆಯು ಹಿಂತಿರುಗಿಸಿದ 9.03 ಎಕರೆ ಭೂಮಿಯನ್ನು ಪಡೆದು ಎಕರೆಗೆ 18.00 ಲಕ್ಷಗಳ ಬೆಲೆಗೆ ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆಗೆ ಹಂಚಿಕೆ ಮಾಡುವುದು,

ಇ) ಬಾಹ್ಯಾಕಾಶ ಇಲಾಖೆಯಿಂದ ಪಡೆದ ಹಣವನ್ನು ಈ ಕೆಳಕೆಂಡಂತೆ ಹಂಚಿಕೆ ಮಾಡುವುದು.

1) 2 ಎಕರೆ ಭೂಮಿಗೆ ಹೊಂದಿಕೊಂಡಂತೆ ಕಿಯೋನಿಕ್ಸ್ ಭವನವನ್ನು ಕಳೆದು ಕೊಂಡಿದ್ದಕ್ಕೆ ಕಿಯೋನಿಕ್ಸ್ ಸಂಸ್ಥೆಗೆ ರೂ. 108.00 ಲಕ್ಷಗಳ ಪರಿಹಾರ ಪಾವತಿ (ಇದರಲ್ಲಿ ರೂ. 53.80 ಲಕ್ಷಗಳು ಅನುದಾನವಾಗಿಯೂ ಮತ್ತು ರೂ. 54.20 ಲಕ್ಷಗಳು ಬಂಡವಾಳವಾಗಿಯೂ).

2) ಕೆಎಸ್ ಎಸ್ ಐ ಡಿ ಸಿ ಯಿಂದ 9.03 ಎಕರೆ ಭೂಮಿಯನ್ನು ಹಿಂದಿರುಗಿ ಪಡೆದದ್ದಕ್ಕಾಗಿ ರೂ. 55.50 ಲಕ್ಷಗಳ ಕೊಡುಗೆ. ಆಯವ್ಯಯದಲ್ಲಿ ಈ ವ್ಯವಹಾರಕ್ಕೆ ಹಣವನ್ನು ಒದಗಿಸಿಲ್ಲವಾದ್ದರಿಂದ

ಆಯವ್ಯಯೆದಲ್ಲಿ ಈ ವ್ಯವಹಾರಕ್ಕೆ ಹಣವನ್ನು ಒದಗಿಸ್ಲವಾದ್ದರಿಂದ ಕಿಯೋನಿಕ್ಸ್ ಸಂಸ್ಥೆಗೆ ಪಾವತಿ ಮಾಡಲು ರೂ. 108.00 ಲಕ್ಷಗಳನ್ನು ಬೇಡಿಕೆಯಲ್ಲಿ ಸೇರಿಸಿದೆ ಮತ್ತು ಕೆಎಸ್ಐಐಡಿಸಿಗೆ ರೂ. 55.50 ಲಕ್ಷಗಳನ್ನು ಪಾವತಿ ಮಾಡಲು ಅಭಿಯಾಚನೆ ಸಂಖ್ಯೆ: 7-ಸಣ್ಣ ಪ್ರಮಾಣದ ಉದ್ದಿಮೆಗಳು ಇದರಲ್ಲಿ ಸೇರಿಸಲಾಗಿದೆ.

ಬಾಬು ಸಂಖ್ಯೆ 2 ಮತ್ತು 4 : ಮೈಸೂರು ಪೇಪರ್ ಮಿಲ್ ಪುನರ್ವಸತಿಗಾಗಿ ಕೆಲವು ಪರಿಹಾರ ಮತ್ತು ರಿಯಾಯಿತಿಗಳನ್ನು ನೀಡಲು ಮಂಜೂರಾತಿ ನೀಡಲಾಗಿದೆ. ಈ ಪರಿಹಾರ ಕ್ರಮಗಳ ಭಾಗವಾಗಿ ಸಹಯಧನವನ್ನು ನೀಡಲು ರೂ. 1123.24 ಲಕ್ಷಗಳು ಹಾಗೂ ಸಾಲವನ್ನು ಈಕ್ವಿಟಿಯಾಗೆ ಪರಿವರ್ತಿಸಲು ರೂ. 1400.00 ಲಕ್ಷಗಳ ಅವಶ್ಯಕತೆ ಇದೆ. ಸಹಾಯಧನದ ವಿವರಗಳು ಈ ಕೆಳಕಂಡಂತಿವೆ:-

ಅ) 1994-95ನೇ ಸಾಲಿಗೆ ನ್ಯೂಸ್ ಪ್ರಿಂಟ್ ಮೇಲೆ ಮೈಸೂರು ಪೇಪರ್ ಮಿಲ್ಸ್ ಪಾವತಿಸಬೇಕಾಗಿದ್ದ ಮಾರಾಟ ತೆರಿಗೆ ಸಮಾನವಾದ ರೂ. 710.00 ಲಕ್ಷಗಳ ಸಹಾಯಧನ.

ಆ) ಕರ್ನಾಟಕ ಅರಣ್ಯ ಇಲಾಖೆಯಿಂದ ರೂ. 13.24 ಲಕ್ಷಗಳು ಮತ್ತು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಿಂದ ರೂ. 27.08 ಲಕ್ಷಗಳ ಬೆಲೆಯ ಕಚ್ಚಾ ವಸ್ತುಗಳನ್ನು ಕೊಂಡಿದ್ದರೆ ಮೇಲಿನ ಮಾರಾಟ ತೆರಿಗೆಗೆ ಸಮಾನವಾದ ಸಹಾಯಧನ.

ಇ) ಕರ್ನಾಟಕ ಅರಣ್ಯ ಇಲಾಖೆ ಮತ್ತು ಕರ್ನಾಟಕ ಅರಣ್ಯ ಅಭಿವೃದ್ಧಿ ಇಲಾಖೆ ತೆಗೆದುಕೊಂಡ ವಸ್ತುಗಳ ಮೇಲಿನದನ ಸೈನೋರೈಜ್ ದರದಲ್ಲಿ ಶೇಕಡ 50ರಷ್ಟು ಕಡತಕ್ಕೆ ಸಹಾಯಧನವು ಈ ಕೆಳಕಂಡಂತಿದೆ.

ಕರ್ನಾಟಕ ಅರಣ್ಯ ಇಲಾಖೆ... ರೂ. 155.45 ಲಕ್ಷಗಳು
ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ... 217.77 ಲಕ್ಷಗಳು

ಕರ್ನಾಟಕ ಅರಣ್ಯ ಅಭಿವೃದ್ಧಿ ಇಲಾಖೆಗೆ ಪಾವತಿಸಬೇಕಾದ ಹಣವನ್ನು ಈ ನಿಗಮದಿಂದ ಬಾಕಿ ಇರುವ ಮೊಬಲಗಿಗೆ ಹಾಗೂ ಅರಣ್ಯ ಇಲಾಖೆಗೆ ಪಾವತಿಸಬೇಕಾದ ಮೊಬಲಗನ್ನು ಅರಣ್ಯ

ಇಲಾಖೆಯ ಜಮೆಗಳಿಗೆ ಹೊಂದಾಣಿಕೆ ಮಾಡಲಾಗುವುದು. ವಾಣಿಜ್ಯ ಇಲಾಖೆಗೆ ಪಾವತಿಸ ಬೇಕಾದ ಮಾರಾಟ ತೆರಿಗೆಯನ್ನು ಮಾರಾಟ ತೆರಿಗೆಯನ್ನು ಮಾರಾಟ ತೆರಿಗೆಅಡಿಯಲ್ಲಿ ಜಮೆ ಯಾಗಿ ತೆಗೆದುಕೊಳ್ಳಲಾಗುವುದು. ಆದ್ದರಿಂದ ಈ ಪ್ರಕರಣದಲ್ಲಿ ನಗದು ಹಣ ಹೊರಗೆ ಹೋಗು ವುದಿಲ್ಲ ಅಲ್ಲದೆ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಲು ರೂ. 1400.00 ಲಕ್ಷಗಳು ಅವಶ್ಯಕತೆ ಇದ್ದು. ಇದನ್ನೂ ಸಹ ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ: 5 ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆಯನ್ನು ಬ್ಯೂರೋ ಆಫ್ ಇಂಡಸ್ಟ್ರಿಯಲ್ ರೀ ಫೈನಾನ್ಸ್‌ನಲ್ಲಿ ನೋಂದಾಯಿಸಿರೋಗಿಷ್ಟ ಉದ್ದಿಮೆ ಎಂದು ಘೋಷಿಸಲಾಗಿದೆ. ಈ ಕಾರ್ಖಾನೆಯ ದುಡಿಮೆ ಬಂಡವಾಳದ ಸ್ಥಿತಿಯನ್ನು ಸುಧಾರಿಸಲು ಈ ಸಂಸ್ಥೆಯು ದಿನಾಂಕ 1-3-94 ರಿಂದ 31-3-95ರ ವರೆಗೆ ಬಾಕಿ ಇರುವ ಮಾರಾಟ ತೆರಿಗೆಯ ಪಾವತಿಯನ್ನು ಮುಂದೂಡಲು ಕೇಳಿಕೊಂಡಿದೆ. ಸದರಿ ಕಾರ್ಖಾನೆಯಿಂದ ಬಾಕಿ ಇರುವ 34.81 ಲಕ್ಷ ರೂ.ಗಳ ಮೊತ್ತದ ಮಾರಾಟ ತೆರಿಗೆಯನ್ನು ಕಾರ್ಖಾನೆಗೆ ಸಾಲವಾಗಿ ನೀಡಲು ಸರ್ಕಾರವು ನಿರ್ಧರಿಸಿದೆ. ಹೆಚ್ಚುವರಿ ದುಡಿಮೆ ಬಂಡವಾಳಕ್ಕಾಗಿ ಇನ್ನು 150.00 ಲಕ್ಷರೂಗಳ ಅವಶ್ಯಕತೆಯಿದೆ. ಆದ್ದರಿಂದ ಈ ಉದ್ದೇಶಕ್ಕಾಗಿ 984.81 ಲಕ್ಷಗಳು ಅವಶ್ಯಕವಿದ್ದು, ಇದನ್ನು ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ; 6: ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಲಿ. ಸಂಸ್ಥೆಯನ್ನು ಪುನರ್ವಸತಿಗೊಳಿಸು ಸರ್ಕಾರವು ನಿರ್ಧರಿಸಿದೆ. ಈ ಕಾರ್ಖಾನೆಯಿಂದ ಬಾಕಿ ಇರುವ ಮಾರಾಟ ತೆರಿಗೆಯನ್ನು ಬಡ್ಡಿರಹಿತ ಸಾಲವನ್ನಾಗಿ ಪರಿವರ್ತಿಸುವುದು ಪರಿಹಾರಕ್ರಮಗಳಲ್ಲಿ ಒಂದಾಗಿರುತ್ತದೆ. ಈ ಉದ್ದೇಶಕ್ಕಾಗಿ ರೂ. 81.22 ಲಕ್ಷಗಳು ಅವಶ್ಯಕವಿದ್ದು ಈ ಮೊಬಲಗನ್ನು ಬೇಡಿಯಲ್ಲಿ ಸೇರಿಸಿದೆ.

1994-95 ನೆಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)
ಅಭಿಯಾಚನೆಯ ಕ್ರಮಾಂಕ 6
ಗಣಿಗಳು ಮತ್ತು ಭೂವಿಜ್ಞಾನ

(ಲಕ್ಷ ರೂ. ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	1353.62	1353.62
		ಬಂಡವಾಳ	...	...	...
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	...
ಬಂಡವಾಳ	...	30.00	30.00

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಅನುದಾನ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
4853-ಕಬ್ಬಿಣೇತರ ಗಣಿ ಮತ್ತು ಲೋಹ ಉದ್ಯಮಗಳ ಮೇಲಿನ ಬುಡವಾಳ ವೆಚ್ಚ	190-ಸಾರ್ವಜನಿಕ ಮತ್ತು ಇತರೇ ಉದ್ದಿಮೆಗಳಲ್ಲಿ ಬಂಡವಾಳ ಹೂಡಿಕೆ	1, ಹಟ್ಟಿ ಚಿನ್ನದ ಗಣಿಗಳ ಕಂಪನಿ 211. ಬಂಡವಾಳ		30.00	...
		ಒಟ್ಟು		30.00	...
60-ಇತರೆ ಗಣಿ ಮತ್ತು ಲೋಹ ಉದ್ಯಮಗಳು					

ವಿವರಣಾತ್ಮಕ ಟಿಪ್ಪಣಿ

ರಾಜ್ಯ ಸರ್ಕಾರವು ಕರ್ನಾಟಕ ಕಾಪರ್‌ಕನ್ ಸೋರ್ಟಿಯಂ ಲಿಮಿಟೆಡ್‌ಗೆ ರೂ. 30.00 ಲಕ್ಷಗಳ ಸಾಲವನ್ನು ನೀಡಿತ್ತು. ನಂತರ ಈ ಕಂಪನಿಯನ್ನು ಹಟ್ಟಿ ಗೋಲ್ಡ್ ಮೈನ್ ಕಂಪನಿಯಲ್ಲಿ ವಿಲೀನಗೊಳಿಸಲಾಯಿತು. ಕಂಪನಿಯು ಸಾಲವನ್ನು ಮರುಪಾವತಿ ಮಾಡುವ ಸ್ಥಿತಿಯಲ್ಲಿ ಇಲ್ಲದಿದ್ದುದರಿಂದ ಸರ್ಕಾರವು ಈ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಲು ನಿರ್ಧರಿಸಿದೆ. ಆಯವ್ಯಯದಲ್ಲಿ ಈ ಉದ್ದೇಶಕ್ಕೆ ಹಣವನ್ನು ಒದಗಿಸಿಲ್ಲವಾದರಿಂದ, ರೂ. 30.00 ಲಕ್ಷಗಳನ್ನು ಬೇಡಿಕೆಯಲ್ಲಿ ಸೇರಿಸಿದೆ.

27 MAR 1995

ಅಭಿಯಾಚನೆಯ ಕ್ರಮಾಂಕ 7
ಸಣ್ಣ ಉದ್ಯಮಗಳು

(ಲಕ್ಷ ರೂ.ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನಂದಾನ	ಮೂಲ	ರಾಜಸ್ವ	...	11504.71	11504.71
		ಬಂಡವಾಳ	...	3033.60	3033.60
	ಪೂರಕ	ರಾಜಸ್ವ	...	170.00	1170.00
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	00.01	00.01
ಬಂಡವಾಳ	...	55.50	55.50

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಟಿಪ್ಪಣಿ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2851 ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳು	102 ಅಲ್ಪ ಪ್ರಮಾಣದ ಉದ್ಯಮಗಳು.	49 ಗವರ್ನಮೆಂಟ್ ಟೂಲ್ ರೂಂ ಅಂಡ್ ಟ್ರೈನಿಂಗ್ ಸೆಂಟರ್-ಸಬ್ ಸೆಂಟರ್ ಗುಲ್ಬರ್ಗ	1		...
4851 ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳ ಮೇಲಣ ಬಂಡವಾಳ ವೆಚ್ಚ	102 ಅಲ್ಪ ಪ್ರಮಾಣದ ಉದ್ಯಮಗಳು	01 ಕರ್ನಾಟಕ ರಾಜ್ಯದ ಸಣ್ಣ ಉದ್ಯಮಗಳ ಅಭಿವೃದ್ಧಿ ನಿಗಮ	2	5550	...
		ರಾಜಸ್ವ	0.01		
		ಬಂಡವಾಳ	55.50		

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ 1:- ಗವರ್ನಮೆಂಟ್ ಟೂಲ್ ರೂಂ ಅಂಡ್ ಟ್ರೈನಿಂಗ್ ಸೆಂಟರ್‌ನ ಸಬ್‌ಸೆಂಟರ್ ಒಂದನ್ನು ಗುಲ್ಬರ್ಗದಲ್ಲಿ ಸ್ಥಾಪಿಸಲು ಸರ್ಕಾರವು ನಿರ್ಧರಿಸಿದೆ, ಈ ಸೆಂಟರ್‌ನ ಆವರ್ತಕ ಮತ್ತು ಅನಾವರ್ತಕ ವೆಚ್ಚವನ್ನು ಭರಿಸಲು ರೂ. 85.00 ಲಕ್ಷಗಳ ಅವಶ್ಯಕತೆಯಿದೆ. ಈ ಪೂಣ ಮೊಬಲಗನ್ನು ಉಳಿತಾಯದ ಮರುವಿನಿಯೋಗದಿಂದ ಭರಿಸಲು ಸಾಧ್ಯವಿರುವುದರಿಂದ ಕೇವಲ ಸಾಂಕೇತಿಕ ಮೊಬಲಗಾಗಿ ರೂ. 1000.00ವನ್ನು ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ 2:- ವಿವರಣೆಗಾಗಿ ದಯವಿಟ್ಟು ಅಭಿಯಾಚನೆ ಸಂಖ್ಯೆ 5ರ ವಿವರಣಾತ್ಮಕ ಟಿಪ್ಪಣಿಯನ್ನು ನೋಡುವುದು.

ಅಭಿಯಾಚನೆಯ ಕ್ರಮಾಂಕ. 9

ಜವಳಿ ಕೈಗಾರಿಕೆಗಳು ಇತ್ಯಾದಿ

(ಲಕ್ಷರೂಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	4980.46	4980.46
		ಬಂಡವಾಳ	...	1839.07	1839.07
	ಪೂರಕ	ರಾಜಸ್ವ	...	256.75	256.75
		ಬಂಡವಾಳ	9.12	307.95	317.07

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು.

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	...
ಬಂಡವಾಳ	...	289.01	289.01

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಪ್ರ. ಸಂಖ್ಯೆ	ಹಣದ ಅಗತ್ಯತೆ ಲಕ್ಷ (ರೂಪಾಯಿಗಳಲ್ಲಿ)	
				ಯೋಜನೆ	ಯೋಜನೇತರ
1	2	3	4	5	6
4851-ಗ್ರಾಮೋದ್ಯಮ ಮತ್ತು ಸಣ್ಣ ಪುಟ್ಟ ಉದ್ಯಮಗಳ ಮೇಲಣ ಬಂಡವಾಳ ವೆಚ್ಚ	103-ಕೈ ಮಗ್ಗದ ಉದ್ದಿಮೆಗಳು	1-ಕೈಮಗ್ಗ ಅಭಿವೃದ್ಧಿ ನಿಗಮ			
		09-ಜನತಾಬಟ್ಟೆ ಯೋಜನೆ-ಪ್ಯಾಕೇಜ್-2 ಇದರಡಿಯಲ್ಲಿ ಭಾರತ ಸರ್ಕಾರದಿಂದ ಶೇರು ಸಹಾಯ	1	289.00	...
6851-ಗ್ರಾಮೀಣಮತ್ತು ಸಣ್ಣ ಕೈಗಾರಿಕೆಗಳಿಗೆ ಸಾಲಗಳು	103-ಕೈಮಗ್ಗ ಉದ್ದಿಮೆಗಳು	2-ಇತರೆ ಸಾಲಗಳು			
		22-ಕೈಮಗ್ಗದ ನೇಕಾರರಿಗೆ ಪ್ರಾಜೆಕ್ಟ್ ಪ್ಯಾಕೇಜ್ ಯೋಜನೆ-ಕೆಹೆಚ್‌ಡಿಸಿ	2	0.01	...
			ಒಟ್ಟು	289.01	...

ವಿವರಣಾತ್ಮಕ ಟಿಪ್ಪಣಿ

ಬಾಬ್ತು ಸಂಖ್ಯೆ : 1ಜನತಾ ಬಟ್ಟೆ ಯೋಜನೆ (ಪ್ಯಾಕೇಟ್-2) ಇದರಡಿಯಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಕೇಂದ್ರ ಸರ್ಕಾರದ ಪೇರು ಸಹಾಯವನ್ನು ನೀಡಲು ರೂ. 289 ಲಕ್ಷಗಳ ಅದೇಶ್ಯಕತೆಯಿದೆ, ಈ ಯೋಜನೆಯು ಕೇಂದ್ರ ಸರ್ಕಾರದಿಂದ ಶೇಕಡಾ 100ರಷ್ಟು ಸಹಾಯವನ್ನು ಪಡೆಯಲ್ಲಿದ್ದು ಈ ಯೋಜನೆಗೆ ಆಯ್ಯವಯದಲ್ಲಿ ಅವಕಾಶವಿರುವುದಿಲ್ಲ, ಆದ್ದರಿಂದ ಈ ಮೊಬಲಗನ್ನು ಬೇಡಿಕೆಯ ಸೇರಿಸಿದೆ.

ಬಾಬ್ತು ಸಂಖ್ಯೆ: 2 ಕೇಂದ್ರ ಸರ್ಕಾರವು ಕೈಮಗ್ಗ ನೇಕಾರರಿಗೆ ಸಹಾಯ ನೀಡಲು ಕೇಂದ್ರ ಪುರಸ್ಕೃತ ಪ್ರಾಜೆಕ್ಟ್ ಪ್ಯಾಕೇಜ್ ಯೋಜನೆಯೊಂದನ್ನು, ಕರ್ನಾಟಕ ಕೈಮಗ್ಗದ ಅಭಿವೃದ್ಧಿ ನಿಗಮದ ಮುಖಾಂತರ ರಾಯಚೂರು, ಗುಲ್ಬರ್ಗಾ, ಧಾರವಾಡ, ತುಮಕೂರು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಜಾರಿಗೆ ತರಲು ಒಟ್ಟು ರೂ. 139.25 ಲಕ್ಷಗಳ ಯೋಜನೆಗೆ ಮಂಜೂರಾತಿ ನೀಡಿದೆ, ಈ ಯೋಜನೆಗೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅನುದಾನ ಮತ್ತು ಸಾಲದ ಅನುಪಾತಗಳು ಕ್ರಮವಾಗಿ62:38 ಮತ್ತು 87:13 ಆಗಿರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದ ಅನುದಾನ ರೂ. 40.365 ಮತ್ತು ಸಾಲ ರೂ. 64.415 ಲಕ್ಷಗಳು ಒಟ್ಟು ರೂ. 104.78 ಲಕ್ಷಗಳು, ಇದರ ಬಾಬ್ತು ಈಗಾಗಲೇ ಕೇಂದ್ರ ಸರ್ಕಾರವು ರೂ. 56.50 ಲಕ್ಷಗಳನ್ನು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ. ಈ ಯೋಜನೆಯಲ್ಲಿ ರಾಜ್ಯ ಸರ್ಕಾರದ ಪಾಲು ಅನುದಾನ ರೂ. 24.645 ಲಕ್ಷಗಳು ಮತ್ತು ಸಾಲ ರೂ. 9825 ಲಕ್ಷ ಒಟ್ಟು ರೂ. 34.470 ಲಕ್ಷಗಳಾಗಿರುತ್ತದೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ರಾಜಸ್ವ ಶೀರ್ಷಿಕೆಯಡಿಯಲ್ಲಿ ಪ್ರಸ್ತುತ ರೂ. 29.255 ಲಕ್ಷಗಳು ಮತ್ತು ಸಾಲದ ಶೀರ್ಷಕೆಯಡಿ ರೂ. 44.182 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಅಯವ್ಯಯದ ರಾಜಸ್ವ ಶೀರ್ಷಿಕೆಯಡಿ ಅವಕಾಶವನ್ನು ಮಾಡಲಾಗಿದೆ. ಸಾಲದ ಶೀರ್ಷಿಕೆಯಡಿಯಲ್ಲಿನ ರೂ. 44.182 ಲಕ್ಷಗಳನ್ನು ಉಳಿತಾಯದ ಮರುವಿಯೋಗದಿಂದ ಭರಿಸಲು ಸಾಧ್ಯವಿರುವುದರಿಂದ ಕೇವಲ ಸಾಂಕೇತಿಕ ಮೊಬಲ ಬೇಡಿಕೆಯಲ್ಲಿ ನೀಡಿದೆ.

1994-95 ನೆಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯಾಚನೆಯ ಕ್ರಮಾಂಕ 10 - ಸಕ್ಕರೆ ಕೈಗಾರಿಕೆಗಳು

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	20.01	20.01
		ಬಂಡವಾಳ	...	600.00	600.00
	ಪೂರಕ	ರಾಜಸ್ವ	...	...	...
		ಬಂಡವಾಳ	...	797.00	797.00

1994-95...ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	...
ಬಂಡವಾಳ	...	140.00	140.00

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ ಒಳ ಮತ್ತು	ವಿವರಣಾ ಶೀರ್ಷಿಕೆ	ಪ್ರವರ್ಗ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
6860-ಗ್ರಾಹಕ ವಸ್ತುಗಳ ಉದ್ಯಮಗಳಿಗೆ ಸಾಲಗಳು	190-ಸಾರ್ವಜನಿಕ ವಲಯ ಮತ್ತಿತರ ಸಾಲಗಳು	01-ಗಂಗಾವತಿ ಸಕ್ಕರೆ		140.00	...
04-ಸಕ್ಕರೆ		ಒಟ್ಟು		140.00	...

ವಿವರಣಾತ್ಮಕ ಟಿಪ್ಪಣಿ

ಗಂಗಾವತಿ ಸಕ್ಕರೆ ಕಾರ್ಖಾನೆಯನ್ನು ಪುನರ್ವಸತಿ ಮತ್ತು ಪುನಶ್ಚೇತನ ಗೊಳಿಸುವ ಕಾರ್ಯಕ್ರಮಕ್ಕಾಗಿ ರೂ. 140.00 ಲಕ್ಷಗಳ ಬಡ್ಡಿ ರಹಿತ ಸಾಲವನ್ನು ಮಂಜೂರುಮಾಡಲಾಗಿದೆ. ಕಾರ್ಖಾನೆಯ ದುಡಿಮೆ ಬಂಡವಾಳದ ತುರ್ತು ಅಗತ್ಯಕ್ಕಾಗಿ ಈ ಮೊಬಲಗನ್ನು ಬಿಡುಗಡೆಮಾಡಲಾಗಿದೆ. ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಹಣವನ್ನು ಒದಗಿಸಿಲ್ಲವಾದ್ದರಿಂದ ಅಗತ್ಯವಿರುವ ಮೊಬಲಗಾದ ರೂ. 140.00 ಲಕ್ಷಗಳನ್ನು ಬೇಡಿಕೆಯಲ್ಲಿ ಸೇರಿದೆ.

ಅಭಿಯಾಚನೆಯ ಕ್ರಮಾಂಕ 13

ಉನ್ನತ ಶಿಕ್ಷಣ

				ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	...	24262.92	24262.92
		ಬಂಡವಾಳ	...	...	30.00	30.00
	ಪೂರಕ	ರಾಜಸ್ವ	...		10.51	10.51
		ಬಂಡವಾಳ			...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	425.00	425.00
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ ಒಳ ಮತ್ತು ವಿವರಣಾ ಶೀರ್ಷಿಕೆ		ಪ್ರವರ್ಗ	ಹಣದ ಆಗತ್ಯತೆ (ಲಕ್ಷ ರೂಪಾಯಿಗಳಲ್ಲಿ)	
				ಯೋಜನೆ	ಯೋಜನೇತರ
1	2	3	4	5	6
6860-ಗ್ರಾಹಕ	190-ಸಾರ್ವಜನಿಕ	01-ಗಂಗಾವತಿ ಸಕ್ಕರೆ		140.00	...
2202. ಸಾಮಾನ್ಯ ಶಿಕ್ಷ	101-ಸರ್ಕಾರೇತರ ಕಾಲೇಜುಗಳಿಗೆ ಮತ್ತು ಸಂಸ್ಥೆಗಳಿಗೆ ಸಹಾಯ	1-ಕಾಲೇಜು ಶಿಕ್ಷಣ 01-ಬೋಧನೆ			
03, ವಿಶ್ವವಿದ್ಯಾಲಯ ಮತ್ತು ಇತರೆ ಉನ್ನತ ಶಿಕ್ಷಣ	101-ಸಹಾಯಾನುದಾನ			...	425.00
		ಒಟ್ಟು		...	425.00

ವಿವರಣಾತ್ಮಕ ಟಿಪ್ಪಣಿ

ಶ್ರೇಷ್ಠ ನ್ಯಾಯಾಲಯದ ತೀರ್ಪಿನನುಸಾರ ಅನುದಾನಿಕ ಪದವಿ ಕಾಲೇಜುಗಳ 305, ಸ್ಟಾಪ್-ಗ್ಯಾಪ್ ಉಪನ್ಯಾಸಕರುಗಳಿಗೆ ಪೂರ್ತಿ ವೇತನ ನೀಡಬೇಕಾಗಿರುತ್ತದೆ. ಆದ್ದರಿಂದ ರೂ. 425.00 ಲಕ್ಷಗಳ ಹೆಚ್ಚುವರಿ ಅನುದಾನವು ಬೇಕಾಗಿರುತ್ತದೆ.

ಅಭಿಯಾಚನೆಯ ಕ್ರಮಾಂಕ 14
ಯುವಜನ ಸೇವೆಗಳು

				ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ. (ಲಕ್ಷ ರೂಗಳಲ್ಲಿ)
ಅನುದಾನ	ಮೂಲ	ರಾಜಸ್ವ	...	2608.99	2608:99	
		ಬಂಡವಾಳ	...	...	...	...
	ಪೂರಕ	ರಾಜಸ್ವ	...	...	...	...
		ಬಂಡವಾಳ	...	...	...	...

27 MAR 1995

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	4.94	4.94
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಇತರೆ ಟಿಪ್ಪಣಿ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2202-ಕ್ರೀಡೆ ಮತ್ತು ಯುವಜನ ಸೇವೆಗಳು	103 ವಿದ್ಯಾರ್ಥಿಯಲ್ಲ ಯುವಜನ ಸಮಾವೇಶ ದವರಿಗೆ ಯುವಜನ ಕಲ್ಯಾಣ ಕಾರ್ಯ ಕ್ರಮಗಳು	21. ರಾಷ್ಟ್ರೀಯ 4.94		...	
				4.94	...

ವಿವರಣಾತ್ಮಕ ಟಿಪ್ಪಣಿ

ರಾಷ್ಟ್ರೀಯ ಯುವಜನ ಸಮಾವೇಶವನ್ನು ರಾಜ್ಯ ಸರಕಾರವು ನಡೆಸುವ ಸಲುವಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ರೂ. 4,93,937ನ್ನು ಬಿಡುಗಡೆ ಮಾಡಿದೆ. ಆಯವ್ಯದಲ್ಲಿ ಸಮಾವೇಶವನ್ನು ನಡೆಸುವ ಸಲುವಾಗಿ ಹಣವನ್ನು ಒದಗಿಸಿಲ್ಲವಾದ್ದರಿಂದ ಈ ಮೊಬಲಗನ್ನು ಬೇಡಿಕೆಯಲ್ಲಿ ಸೇರಿಸಿದೆ.

ಅಭಿಯಾಚನೆಯ ಕ್ರಮಾಂಕ 15

ಕಲೆ ಸಂಸ್ಕೃತಿ ಮತ್ತು ಕನ್ನಡದ ಅಭಿವೃದ್ಧಿ

(ಲಕ್ಷ ರೂ.ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	0.38	1494.47	1494.85
		ಬಂಡವಾಳ	...	...	...
	ಪೂರಕ	ರಾಜಸ್ವ	...	23.00	23.00
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ	ಪುರಸ್ಕೃತ	ಒಟ್ಟು
	ರೂ.	ರೂ.	ರೂ.
ರಾಜಸ್ವ	...	70.00	70.00
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಬಾಬು ಸಂಖ್ಯೆ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2205. ಕಲೆ ಮತ್ತು ಸಂಸ್ಕೃತಿ	102. ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ	45. ರಸ್ತೆಗಳ ದುರಸ್ತಿ ದಾರಿ ದೀಪಗಳ ಪೂರೈಕೆ ಮತ್ತಿತರ ಅಲಂಕಾರಿಕ ದಸರಾ ಉತ್ಸವಕ್ಕಾಗಿ ಮೈಸೂರು ಮಹಾನಗರ ಪಾಲಿಕೆಗೆ ಸಹಾಯ	1	-	20.00
	107. ವಸ್ತು ಸಂಗ್ರಹಾಲಯಗಳು	04. ಮೈಸೂರು ಅರಮನೆಯ ನಿರ್ವಾಹಣೆ	2	-	20.00
2250. ಇತರೆ ಸಾಮಾಜಿಕ ಸೇವೆಗಳು	800. ಇತರೆ ವೆಚ್ಚಗಳು	141. ಕಾಮಗಾರಿ			
		2. ಇತರೆ ಬಾಬುಗಳು			
		06. ದಸರಾ ಮಹೋತ್ಸವ	3	-	30.00
		ಒಟ್ಟು		-	70.00

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ : 1 ಮೈಸೂರು ಮಹಾನಗರ ಪಾಲಿಕೆಗೆ ರಸ್ತೆಗಳ ದುರಸ್ತಿ ದಾರಿದೀಪಗಳ ಪೂರೈಕೆ ಮತ್ತು ದಸರಾ ಉತ್ಸವ ಪ್ರಯುಕ್ತ ನಗರ ಸೌಂದರ್ಯಕ್ಕಾಗಿ ರೂ. 20.00 ಲಕ್ಷಗಳ ಅವಶ್ಯಕತೆಯಿದೆ. ಆಯವ್ಯಯದಲ್ಲಿ ಇದಕ್ಕಾಗಿ ಹಣವನ್ನು ಒದಗಿ ಸಿಲ್ಲವಾದ್ದರಿಂದ ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ : 2 ಮೈಸೂರು ಅರಮನೆಯ ನಿರ್ವಹಣೆಯು ಕೆಲಸಕ್ಕಾಗಿ ರೂ. 20.00 ಲಕ್ಷಗಳ ಹೆಚ್ಚುವರಿ ಹಣದ ಅಗತ್ಯವಿದೆ.

ಬಾಬು ಸಂಖ್ಯೆ : 3 ದಸರಾ ಮಹೋತ್ಸವಕ್ಕಾಗಿ ರೂ. 30.00 ಲಕ್ಷಗಳ ಹೆಚ್ಚುವರಿ ಹಣದ ಅಗತ್ಯವಿದೆ.

1994 - 95 ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯಾಚನೆಯ ಕ್ರಮಾಂಕ 16

ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

(ಲಕ್ಷ ರೂಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	0.07	133604.02	133604.09
		ಬಂಡವಾಳ	...	...	...
	ಪೂರಕ	ರಾಜಸ್ವ	...	437.00	437.00
		ಬಂಡಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	104.00	104.00
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ		ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2202-ಸಾಮಾನ್ಯ ಶಿಕ್ಷಣ 02-ಸೆಕೆಂಡರಿ ಶಿಕ್ಷಣ	800- ಇತರೆ ವೆಚ್ಚ	8-ಕೇಂದ್ರ ಪುರಸ್ಕೃತ ಯೋಜನೆ ಯಡಿಯಲ್ಲಿ ಶಾಲೆಗಳಲ್ಲಿ ಗಣಕ ಸಾಕ್ಷರತೆ ಮತ್ತು ಅಧ್ಯಯನ		104.00	...
		ಒಟ್ಟು		104.00	...

ವಿವರಣಾತ್ಮಕ ಟಿಪ್ಪಣಿ

1994-95ನೇ ಸಾಲಿಗೆ ಶಾಲೆಗಳಲ್ಲಿ ಕೇಂದ್ರ ಪುರಸ್ಕೃತ ಗಣಕ ಸಾಕ್ಷರತಾ ಮತ್ತು ಅಧ್ಯಯನ ಯೋಜನೆಯನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು 104.00 ಲಕ್ಷ ರೂಗಳನ್ನು ಬಿಡುಗಡೆ ಮಾಡಿದೆ. ಇದಕ್ಕಾಗಿ ಆಯವ್ಯಯದಲ್ಲಿ ಹಣವನ್ನು ಒದಗಿಸಿಲ್ಲವಾದ್ದರಿಂದ ಅವಶ್ಯಕ ವಿರುವ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ.

ಅಭಿಯಾಚನೆಯ ಕ್ರಮಾಂಕ-17

ವರಮಾನ ತೆರಿಗೆ ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು

				ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	020	10183.86	10184.06
		ಬಂಡವಾಳ	...	...	...	...
	ಪೂರಕ	ರಾಜಸ್ವ	...	...	...	...
		ಬಂಡವಾಳ	...	...	59.07	59.07

1994-95ನೇಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು.

		ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	100.00	100.00
ಬಂಡವಾಳ	...	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಪ್ರಭೃತ/ಪುರಸ್ಕೃತ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2852-ಉದ್ಯಮಗಳು 80-ಸಾಮಾನ್ಯ	800-ಇತರೆ ವೆಚ್ಚಗಳು	07-ಉದ್ಯಮಶೀಲರಿಗೆ ಹೊಸ ಉದ್ಯಮ ಗಳನ್ನು ಪ್ರಾರಂಭಿಸಲು			

ಉತ್ತೇಜನ	100.00	...
ಜುಮ್ಲಾ	100.00	...

ವಿವರಣಾತ್ಮಕ ಟಿಪ್ಪಣಿ

1993-94ನೇ ಪೂರಕ ಅಂದಾಜು (ಅಂತಿಮ ಕಂತು) ಇದರಲ್ಲಿ 435-00 ಲಕ್ಷ ರೂಪಾಯಿಗಳನ್ನು ಅಸಲು ಮತ್ತು ಬಡ್ಡಿ ಸೇರಿಸಿ ನ್ಯಾಯಾಲಯದ ಆದೇಶದ ಪ್ರಕಾರ ಮಾರಾಟ ತೆರಿಗೆ ಮರುಪಾವತಿಗಾಗಿ ಸೇರಿಸಲಾಗಿತ್ತು.* ಕೆಲವು ಸ್ಪಷ್ಟೀಕರಣಕ್ಕಾಗಿ ಬಡ್ಡಿ ಹಣವನ್ನು ವರ್ಷದ ಅಂತ್ಯದೊಳಗೆ ಮರುಪಾವತಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ 100-00 ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ. ಆಯವ್ಯಯದಲ್ಲಿ ಇದಕ್ಕಾಗಿ ಹಣವನ್ನು ಒದಗಿಸಿಲ್ಲವಾದ್ದರಿಂದ ಬೇಡಿಕೆಯಲ್ಲಿ ಸೇರಿಸಲಾಗಿದೆ.

1994-95 ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯಾಚನೆಯ ಕ್ರಮಾಂಕ 19

ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ. (ಲಕ್ಷ ರೂಗಳಲ್ಲಿ)
ಅನುದಾನ	ಮೂಲ	ರಾಜಸ್ವ	105.00	46448.98	46553.98
		ಬಂಡವಾಳ	...	...	...
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	18.10	591.96	610.06
ಬಂಡವಾಳ	...	...	...

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಕ್ರಮಸಂಖ್ಯೆ	ಹಣದ ಅಗತ್ಯತೆ ಲಕ್ಷ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2071-ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯ ಗಳು	101-ವಯೋಮಿತಿ ವಿಶ್ರಾಂತಿ ವೇತನ ಮತ್ತು ನಿವೃತ್ತಿ ಭತ್ಯಗಳು	3 ರಾಜ್ಯ ಸರ್ಕಾರಿ ವಿಶ್ರಾಂತಿ ವೇತನಗಳು			
		01 ಭಾರತದಲ್ಲಿ ನೀಡಿದ ವಿಶ್ರಾಂತಿ ವೇತನ ಪುರಸ್ಕೃತ	...1	...	252.88
01-ನಾಗರೀಕ		ಪ್ರಭೃತ	...2	...	18.00
	ವಿಶ್ರಾಂತಿ ವೇತನದ ಪರಿವರ್ತಿತ ಮೌಲ್ಯ	3 ಇತರೆ ಸಂದಾಯಗಳು			
		01 ಕರ್ನಾಟಕ ಪಿಂಚಣಿದಾರರ ವಿಶ್ರಾಂತಿ ವೇತನಗಳು	...3	...	75.00
	104- ಉಪದಾನಗಳು	2 ಇತರ ಉಪದಾನಗಳು ಕರ್ನಾಟಕ...			
		03 ಪರಿಷ್ಕೃತ ವಿಶ್ರಾಂತಿ ವೇತನ ನಿಯಮಗಳು ಮೇರೆಗಿನ ಉಪದಾನಗಳು	...4	...	127.37
	105-ಕುಟುಂಬ ವಿಶ್ರಾಂತಿ ವೇತನಗಳು	3 ಇತರ ಕುಟುಂಬ ವಿಶ್ರಾಂತಿ ವೇತನ ಗಳು ಕರ್ನಾಟಕ	5	...	63.00

1	2	3	4	5	6
	106-ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು ವಿಶ್ರಾಂತಿ ವೇತನದ ವೆಚ್ಚಗಳು	ಪ್ರಭೃತ	...6	...	0.10
	108-ಭವಿಷ್ಯನಿಧಿಗೆ ಅಂಶ ದಾನಗಳು	01 ವಾಣಿಜ್ಯ ಸಂಸ್ಥೆಗಳ ಭವಿಷ್ಯನಿಧಿಗೆ ಅಂಶದಾನಗಳು	...7	...	10.01
	101-ಸ್ಥಳೀಯ ಸಂಸ್ಥೆಗಳ ನೌಕರರ ವಿಶ್ರಾಂತಿ ವೇತನ	1 ಪುರಸಭೆ ನೌಕರರಿಗೆ ಸಂದಾಯ	...8	...	60.00
	111. ಶಾಸಕರಿಗೆ ವಿಶ್ರಾಂತಿ ವೇತನ	01 ವಿಧಾನಮಂಡಲದ ಸದಸ್ಯರ ವಿಶ್ರಾಂತಿ ವೇತನ	...9	...	12.70
		ಪುರಸ್ಕೃತ	...	...	591.96
	ಒಟ್ಟು				
		ಪ್ರಭೃತ	...	...	18.10

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ 1 ರಿಂದ 9- ನಿವೃತ್ತಿ ವೇತನ, ಮತ್ತು ಉಪದಾನ ಮುಂತಾದವುಗಳ ಪಾವತಿಗಾಗಿ ಹೆಚ್ಚುವರಿ ಮೊತ್ತದ ಅವಶ್ಯಕತೆ ಇದೆ. ಆಯವ್ಯಯದಲ್ಲಿ ಅದಕ್ಕಾಗಿ ಒದಗಿಸಲಾದ ಮೊತ್ತವು ಸಾಲದಿರುವುದರಿಂದ ಅವಶ್ಯಕತೆಯಿರುವ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ.

1994 - 95 ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯಾಚನೆಯ ಕ್ರಮಾಂಕ 20

ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

(ಲಕ್ಷ ರೂ. ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	1267.00	1267.00
		ಬಂಡವಾಳ	...	1725.45	1725.45
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	...
ಬಂಡವಾಳ	...	90.00	90.00

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ ಒಳ ಮತ್ತು	ವಿವರಣಾ ಶೀರ್ಷಿಕೆ	ಟಿಪ್ಪಣಿ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
7610 ಸರ್ಕಾರಿ ನೌಕರರು ಮೊದಲಾದವರಿಗೆ ಸಾಲಗಳು	202 ಮೋಟಾರು ವಾಹನ ಖರೀದಿಗೆ ಮುಂಗಡಗಲು ವಾಹನ	02 ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಮೋಟಾರು	1		30.00
	206 ಕೈಮಗ್ಗದ ಬಟ್ಟೆಗಳ ಖರೀದಿಗಾಗಿ	-	2	-	60.00
	ಸಾಲ	ಜುಮ್ಲಾ		-	90.00

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ 1; ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಮೋಟಾರು ವಾಹನ ಮುಂಗಡ ಪಾವತಿಗಾಗಿ ಬಾಕಿ ಇರುವ ಅರ್ಜಿಗಳ ವಿಲೇವಾರಿಗಾಗಿ 30,00 ಲಕ್ಷ ರೂ.ಗಳ ಹೆಚ್ಚುವರಿ ಮೊತ್ತದ ಅಗತ್ಯವಿದೆ.

ಬಾಬು ಸಂಖ್ಯೆ 2; ಸರ್ಕಾರಿ ನೌಕರರಿಗೆ ಕೈಮಗ್ಗ ಬಟ್ಟೆಗಳ ಖರೀದಿಗಾಗಿ ನೀಡಲಾಗುವ ಮುಂಗಡ ಯೋಜನೆಯನ್ನು 8ನೇ ಪಂಚವಾರ್ಷಿಕ ಯೋಜನೆ 31-3-1997ರ ವರೆಗೆ ವಿಸ್ತರಿಸಲು ಸರ್ಕಾರವು ನಿರ್ಧರಿಸಿದ್ದು ಮತ್ತು ಈ ವರ್ಷಕ್ಕೆ ಬೇಕಾಗುವ 60.00 ಲಕ್ಷ ರೂ.ಗಳನ್ನು ಮಂಜೂರು ಮಾಡಿತು. ಇದಕ್ಕಾಗಿ ಆಯವ್ಯಯದಲ್ಲಿ ಹಣವನ್ನು ಒದಗಿಸದೇ ಇದ್ದುದರಿಂದ 60.00 ಲಕ್ಷರೂ. ಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಯಿತು. ಈಗ ನಿಧಿಗೆ ಮರುಪಾವತಿಗಾಗಿ ಅಷ್ಟೇ ಮೊತ್ತದ ಅಗತ್ಯವಿದೆ.

ಅಭಿಯಾಚನೆಯ ಕ್ರಮಾಂಕ 21

ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರ

(ಲಕ್ಷ ರೂ.ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	4233.70	4233.70
		ಬಂಡವಾಳ	...	80.00	80.00
	ಪೂರಕ	ರಾಜಸ್ವ	...	2657.00	2657.00
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	1203.00	1203.00
ಬಂಡವಾಳ	...	....	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಬಾಬು ಸಂಖ್ಯೆ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2047-ಇತರೆ ಆರ್ಥಿಕ ಸೇವೆಗಳು	103- ಸಣ್ಣ ಉಳಿತಾಯಕ್ಕೆ ಪ್ರೋತ್ಸಾಹ	01-ನಿರ್ದೇಶಕರು ಸಣ್ಣ ಉಳಿತಾಯ			
		041-ಪ್ರಯಾಣ ವೆಚ್ಚ	1	...	1.00
		050-ಕಛೇರಿ ವೆಚ್ಚ	2	...	1.00
		02-ಪ್ರಚಾರ ಮತ್ತು ಪ್ರಚಾರ ಕಾರ್ಯ			
		190 ಮೋಟಾರು ವಾಹನ	3	...	1.00
		306-ನಗದು ಮತ್ತು ಪ್ರೋತ್ಸಾಹಕ ಬಹುಮಾನ	4	...	1200.00
		ಒಟ್ಟು		...	1203.00

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ: 1,2 ಮತ್ತು 3-ದಿನ ಭತ್ಯೆ, ಪ್ರವಾಸಗಳು, ಅಂಚೆ ವಸ್ತುಗಳ ಬೆಲೆಗಳಲ್ಲಿ ಏರಿಕೆ ಉಂಟಾದ್ದರಿಂದ ಹಾಗೂ ಮೋಟಾರು ವಾಹನಗಳ ದುರಸ್ತಿಗಾಗಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇದೆ.

ಬಾಬು ಸಂಖ್ಯೆ: 4- ಕಿಸಾನ್ ವಿಕಾಸ ಪತ್ರದಲ್ಲಿ ಹಣವನ್ನು ತೊಡಗಿಸಿದ ಆರ್ಥಿಕ ಸಂಸ್ಥೆಗಳಿಗೆ ಮತ್ತು ಏಜಂಟರು ಮುಂತಾದವರಿಗೆ ಪ್ರೋತ್ಸಾಹ ಧನವನ್ನು ನೀಡಲು ಈ ಹೆಚ್ಚುವರಿ ಮೊಬಲಗಿನ ಅವಶ್ಯಕತೆ ಇದೆ. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ, ಭಾರತೀಯ ಜೀವವಿಮಾ ನಿಗಮ ಮತ್ತು ಐಸಿಡಿಎಸ್ ಆರ್ಥಿಕ ಸಂಸ್ಥೆಗಳಿಗೆ ಸಾಧಿಲ್ವಾರು ನಿಧಿಯಿಂದ ರೂ 10 ಕೋಟಿ, 5 ಕೋಟಿ ಹಾಗೂ 42.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಈ ಮೊತ್ತಗಳನ್ನು ಪೂರಕ ಅಂದಾಜುಗಳ 2ನೇ ಕಂತಿನಲ್ಲಿ ಈಗಾಗಲೇ ಸೇರಿಸಲಾಗಿರುವುದರಿಂದ ನಿಧಿಗೆ ಮರುಪಾವತಿಗಾಗಿ 1000 ರೂ.ಗಳ ಸಾಂಕೇತಿಕ ಮೊಬಲಗನ್ನು ಈ ಮೊತ್ತವು ಒಳಗೊಂಡಿರುತ್ತದೆ.

1994 - 95 ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಭಿಯಾಚನೆಯ ಕ್ರಮಾಂಕ 23

ಆಹಾರ ಮತ್ತು ನಾಗರೀಕ ಪೂರೈಕೆ

(ಲಕ್ಷ ರೂಪಾಯಿಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	12585.66	12585.66
		ಬಂಡವಾಳ	...	...	...
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

		ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	0.44	88.04	88.48
ಬಂಡವಾಳ	...	...	35.50	35.50

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಟಿಪ್ಪಣಿ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2408-ಆಹಾರ ದಾಸ್ತಾನು ಮತ್ತು ಉಗ್ರಾಣ	001-ನಿರ್ದೇಶನ ಮತ್ತು ಆಡಳಿತ	02-ಕಾರ್ಯನಿರ್ವಾಹಕ ಸಿಬ್ಬಂದಿ			
		041-ಪ್ರಯಾಣ ವೆಚ್ಚ	...1	...	4.00
		050-ಕಛೇರಿ ವೆಚ್ಚ	...2	...	6.00
01-ಆಹಾರ	102-ಆಹಾರ ಸಹಾಯ ಧನ	02-ಭತ್ತ ಮತ್ತು ಇತರೆ ಏಕದಳ ಧಾನ್ಯಗಳ ಉತ್ಪಾದನಾ ಪ್ರೋತ್ಸಾಹ ಯೋಜನೆ	..3	75.42	
		05 ವಶಪಡಿಸಿಕೊಂಡ ವಸ್ತುಗಳ ಮೇಲೆ ಬಡ್ಡಿ ವಸೂಲಿ (ಪ್ರಭೃತ)	4	...	0.44

1	2	3	4	5	6
	800-ಇತರ ವೆಚ್ಚ	08-ಇತರೆ ಬಾಬುಗಳು	...5	...	2.62
4408-ಆಹಾರ ದಾಸ್ತಾನು ಮತ್ತು ಉಗ್ರಾಣಗಳ ಮೇಲಣ ಬಂಡವಾಳ ವೆಚ್ಚ	190-ಸಾರ್ವಜನಿಕ ವಲಯ ಮತ್ತು ಇತರ ಉದ್ದಿಮೆಗಳಲ್ಲಿ ಬಂಡ ವಾಳ ಹೂಡಿಗೆ	1-ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ 011-ಬಂಡವಾಳ ಹೂಡಿಕೆ	...6		35.5
ಜುಮ್ಲಾ ರಾಜಸ್ವ				75.42	13.06
ಜುಮ್ಲಾ ಬಂಡವಾಳ				35.50	

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ 1 ಮತ್ತು 2. - ಬಾಕಿ ಇರುವ ಬಿಲ್ಲುಗಳ ಪಾವತಿಗಾಗಿ ಹೆಚ್ಚುವರಿ ಮೊತ್ತದ ಅವಶ್ಯಕತೆಯಿದೆ.

ಬಾಬು ಸಂಖ್ಯೆ 3- (ಅ) 1993-94ನೇ ಸಾಲಿನಲ್ಲಿ ಭತ್ತ, ರಾಗಿ ಮತ್ತು ಜೋಳದ ಉತ್ಪಾದನಾ ಪ್ರೋತ್ಸಾಹ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯನ್ವಯ ಭಾರತೀಯ ಆಹಾರ ನಿಗಮವು ಖರೀದಿ ಹಾಗೂ ವಸೂಲಿ ಮಾಡಿದ ಆಹಾರ ಧಾನ್ಯದ ಮೇಲಣ ಪ್ರೋತ್ಸಾಹದ ಮೊತ್ತವಾದ 25.42 ಲಕ್ಷ ರೂ.ಗಳನ್ನು ನಿಗಮಕ್ಕೆ ನೀಡಬೇಕಾಗಿದೆ. ಇದಕ್ಕಾಗಿ ಆಯವ್ಯದಲ್ಲಿ ಹಣವನ್ನು ಒದಗಿಸದೇ ಇರುವುದರಿಂದ ಅವಶ್ಯಕತೆ ಇರುವ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ.

ಆ) ಕೇಂದ್ರ ಸರ್ಕಾರವು ರಾಗಿ, ಜೋಳ ಮತ್ತು ಸಜ್ಜೆ ಈ ದಾನ್ಯಗಳಿಗೆ 1994-95ನೇ ಸಾಲಿಗೆ ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆ ಒಂದು ಕ್ವಿಂಟಾಲಿಗೆ 280.00 ರೂ.ಗಳ ಮೇಲೆ ಒಂದು ಕ್ವಿಂಟಾಲಿಗೆ 45.00 ರೂ.ಗಳಂತೆ ಪ್ರೋತ್ಸಾಹ ಧನ ನೀಡಲು ರಾಜ್ಯ ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಜೋಳ, ರಾಗಿ ಮತ್ತು ಸಜ್ಜೆಗಳಿಗೆ ಇದ್ದ ಒಟ್ಟು ಪ್ರೋತ್ಸಾಹ ಧನ 225 ರೂ.ಗಳನ್ನು (280,00-45 ರೂ.) ಸರ್ಕಾರವು ನೀಡಬೇಕಾಗಿದೆಯಾದ್ದರಿಂದ ಈ ವರ್ಷಕ್ಕೆ ಅವಶ್ಯಕತೆ ಇರುವ 50.00 ಲಕ್ಷ ರೂ.ಗಳನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ.

ಬಾಬು ಸಂಖ್ಯೆ 4 : ನ್ಯಾಯಾಲಯದ ಡಿಕ್ರಿಯ ಪ್ರಕಾರ 43,653-45 ರೂ.ಗಳನ್ನು ವಶಪಡಿಸಿಕೊಂಡ ವಸ್ತುಗಳ ಮೇಲಿನ ಬಡ್ಡಿ ವಸೂಲಿಗಾಗಿ ಪಾವತಿಸಬೇಕಾಗಿರುತ್ತದೆ.

ಬಾಬು ಸಂಖ್ಯೆ 5- ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮಕ್ಕೆ ಮತ್ತು ದಕ್ಷಿಣ

ಕನ್ನಡ ಜಿಲ್ಲೆಯ ಅದರ ಏಜೆಂಟರುಗಳಿಗೆ ಹೆಚ್ಚುವರಿ ಪ್ರಾಸಂಗಿಕ ವೆಚ್ಚಗಳನ್ನು ಪಾವತಿಗಾಗಿ 2.62 ಲಕ್ಷ ರೂ.ಗಳ ಅವಶ್ಯಕತೆಯಿದೆ.

ಬಾಬು ಸಂಖ್ಯೆ 6- ಒಟ್ಟು 284.00 ಲಕ್ಷ ರ.ಗಳ ವೆಚ್ಚದಲ್ಲಿ ಮಾಂಸ ಉತ್ಪನ್ನ ವಸ್ತುಗಳ ಉತ್ಪಾದನೆ ಮತ್ತು ಸಂಸ್ಕರಣಕ್ಕಾಗಿ ಒಂದು ಯೋಜನೆಯನ್ನು ಕಾಂಪ್ಕೋ ಸಂಸ್ಥೆಯಿಂದ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು ಮಂಜೂರಾತಿ ನೀಡಿದೆ. ಈ ವೆಚ್ಚವನ್ನು ಕೇಂದ್ರ ಸರ್ಕಾರ (142.00 ಲಕ್ಷ ರೂ) ರಾಜ್ಯ ಸರ್ಕಾರ (71.00 ಲಕ್ಷ ರೂ.) ಮತ್ತು ಬೆಂಗಳೂರು ಮಹಾನಗರಪಾಲಿಕೆ (71.00 ಲಕ್ಷ ರೂ.ಗಳು) ಇವುಗಳನ್ನು ಭರಿಸುತ್ತದೆ. ಕೇಂದ್ರ ಸರ್ಕಾರವು ಈ ಯೋಜನೆಗಾಗಿ 71.00 ಲಕ್ಷ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರವು ತನ್ನ ಪಾಲಿನ 71.00 ಲಕ್ಷ ರೂ.ಗಳಲ್ಲಿ 35.50 ಲಕ್ಷ ರೂ.ಗಳು ನೀಡಲು ನಿರ್ಧಸಿದೆ. ಇದಕ್ಕಾಗಿ ಆಯವ್ಯಯದಲ್ಲಿ ಮೊತ್ತವನ್ನು ಒದಗಿಸಿಲ್ಲವಾದ್ದರಿಂದ ಇದು ಹೊಸ ಸೇವೆಯಾಗುತ್ತದೆ. ಆದ್ದರಿಂದ ಈ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ. ಇತರೆ ಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಇಷ್ಟೇ ಮೊತ್ತವನ್ನು ಅಧ್ಯರ್ಪಣ ಮಾಡುವದರಿಂದ ನಿವ್ವಳ ನಗದು ಹೊರಕ್ಕೆ ಹೋಗುವುದಿಲ್ಲ.

ಅಭಿಯಾಚನೆಯ ಕ್ರಮಾಂಕ 24

ಅರಣ್ಯ

(ಲಕ್ಷ ರೂ. ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	771.98	15116.16	15888.14
		ಬಂಡವಾಳ	...	425.00	425.00
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	553.00	553.00
ಬಂಡವಾಳ	...	...	...

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ		ಹಣದ ಅಗತ್ಯತೆ ಲಕ್ಷ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2071-ವಿಶ್ರಾಂತಿ ವೇತನ	101-ವಯೋಮಿತಿ	3 ರಾಜ್ಯ ಸರ್ಕಾರಿ ವಿಶ್ರಾಂತಿ ವೇತನಗಳು			
2406-ಅರಣ್ಯ ಮತ್ತು ವನ್ಯ ಜೀವನ	001-ನಿರ್ದೇಶನ ಮತ್ತು ಆಡಳಿತ	2. ನಿರ್ವಹಣಾ ಸಿಬ್ಬಂದಿ 01-ಸಾಮಾನ್ಯ ಸಿಬ್ಬಂದಿ			
01-ಅರಣ್ಯ		60- ಇತರ ವೆಚ್ಚಗಳು	1	...	25.00
		351-ಸಮವಸ್ತ್ರ ವೆಚ್ಚ	2	...	5.00
	101-ಅರಣ್ಯಗಳ ಸಂರಕ್ಷಾ ಅಭಿವೃದ್ಧಿ ಮತ್ತು ಪುನರುತ್ಪಾದನೆ	1. ಕರ್ನಾಟಕ ಅರಣ್ಯಾಭಿವೃದ್ಧಿ ನಿಧಿ ಯೋಜನೆ 02-ಪರಿಹಾರ ನಡುತೋಪು ಬೆಳೆಸುವುದು			
		141-ಕಾಮಗಾರಿ	3	...	50.00
		2. ಇತರ ಯೋಜನೆಗಳು 05-ಕ್ಷಣಿಕ ಅರಣ್ಯಗಳ ಅಭಿವೃದ್ಧಿ (ರಾಜ್ಯ ವಲಯ ಯೋಜನೆ)	4	18.00	...
		10. ನಗರ ಪ್ರದೇಶಗಳನ್ನು ಹಸಿರುಗೊಳಿಸುವುದು (ರಾಜ್ಯ ವಲಯ)	5	20.00	...
		11. ಅರಣ್ಯ ರಕ್ಷಣೆ	6	50.00	...

	102-ಸಾಮಾಜಿಕ ಮತ್ತು ಕೃಪಿ ಅರಣ್ಯ	2. ಇತರ ಯೋಜನೆಗಳು			
		11. ಸಾಮಾಜಿಕ ಅರಣ್ಯ ಯೋಜನೆ (ಕನಿಷ್ಟ ಅಗತ್ಯಗಳ ಕಾರ್ಯಕ್ರಮ) (ರಾಜ್ಯ ವಲಯ)	7	10.00	...
		22. ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವು	8	10.00	...
	105-ಅರಣ್ಯೋತ್ಪತ್ತಿ	01-ಸರ್ಕಾರಿ ಸಂಸ್ಥೆ ಸ್ಥಳಾಂತರಿಸಿದ			
		141. ಕಾಮಗಾರಿ	9	...	300.00
		308, ಆಹಾರ ಮತ್ತು ಮೇವು	10	...	20.00
		04. ಕಾಗದ ಗಿರಣಿಗಳಿಗೆ ಬಿದಿರು ಪೂರೈಕೆ	11	...	25.00
02-ಪರಿಸರ ಅರಣ್ಯ ಮತ್ತು ವನ್ಯ ಜೀವನ	110-ವನ್ಯ ಜೀವನ	01. ಪ್ರಕೃತಿ ಸಂರಕ್ಷಣೆ-ವನ್ಯ ಜೀವನ			
		200. ನಿರ್ವಹಣೆ	12	...	10.00
		ಜುಮ್ಲಾ		108.00	445.00

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ: 1,2,3,9,10,11 ಮತ್ತು 12

ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಕಾರ್ಯಕಾರಿ ಸಿಬ್ಬಂದಿ, ಸಮವಸ್ತ್ರಗಳ ಪೂರೈಕೆ ದುಷ್ಟ ಮೃಗಗಳ ದಾಳಿಯಿಂದ ಸಾವಿಗೀಡಾದ ಮತ್ತು ಗಾಯಗೊಂಡ ಜನರಿಗೆ ಪರಿಹಾರವನ್ನು ನೀಡಲು ಹಾಗೂ ಅರಣ್ಯ ಇಲಾಖೆಯ ಪ್ರಾಣಿಗಳಿಗೆ ಮೇವು ಮತ್ತು ಆಹಾರ ಪೂರೈಕೆ ಮಾಡಲು ರೂ. 445.00 ಲಕ್ಷಗಳ ಹೆಚ್ಚುವರಿ ಮೊಬಲಗಿನ ಅವಶ್ಯಕತೆ ಇದೆ. 1994-95ನೇ ಸಾಲಿನಲ್ಲಿ ಆಯವ್ಯಯದಲ್ಲಿ ಈ ಉದ್ದೇಶಕ್ಕೆ ಸಾಕಪ್ಟು ಹಣವನ್ನು ಒದಗಿಸಿಲ್ಲವಾದ್ದರಿಂದ ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ: 4,5,6,7 ಮತ್ತು 8

1994-95ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಒದಗಿಸಿಲ್ಲವಾದ್ದರಿಂದ ಈ ಬಾಬುಗಳ ಅಡಿಯಲ್ಲಿ ರೂ. 108.00 ಲಕ್ಷಗಳ ಅವಶ್ಯಕತೆ ಇದೆ. ಇಷ್ಟೇ ಮೊತ್ತವನ್ನು ಪ್ರಧಾನ ಲೆಕ್ಕ ಶೀರ್ಷಿಕೆ ''4406- ಅರಣ್ಯ ಮತ್ತು ವನ್ಯ ಜೀವನ'' ಅಡಿಯಲ್ಲಿ ಅದ್ಯರ್ಪಣೆ ಮಾಡುವುದರಿಂದ ಈ ಪ್ರಕರಣದಲ್ಲಿ ನಗದು ಹಣ ಹೊರಗೆ ಹೋಗುವುದಿಲ್ಲ.

ಅಭಿಯಾಚನೆಯ ಕ್ರಮಾಂಕ 25

ರಾಜ್ಯದ ಅಬಕಾರಿ

(ಲಕ್ಷ ರೂ. ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	2642.41	2642.41
		ಬಂಡವಾಳ	...	...	...
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1993-94ನೆಯ ಸಾಲಿನ ಹಣದಭ್ ಅಗತ್ಯತೆಯ ಪೂರಕ ಅಂದಾಜು.

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	153.92	153.92
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಪ್ರಭೃತ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
3465. ಸಾಮಾನ್ಯ ಆರ್ಥಿಕ ಮತ್ತು ವ್ಯಾಪಾರಿ ಸಂಸ್ಥೆಗಳು	192. ವ್ಯಾಪಾರಿ ಸಂಸ್ಥೆಗಳಿಗೆ ಸಹಾಯ	1. ಶುದ್ಧೀಕರಿಸಿದ ಮದ್ಯ ಖರೀದಿಗಾಗಿ ಉಂಟಾದ ಹೆಚ್ಚುವರಿ ವೆಚ್ಚದ ಮರುಪಾವತಿ		...	153.92
		ಜುಮ್ಲಾ:		...	153.92

ವಿವರಣಾತ್ಮಕ ಟಿಪ್ಪಣಿ

ಮೆ: ಎಂ.ಎಸ್.ಐ.ಎಲ್. ಮತ್ತು ಮೈಷುಗರ್ ಸಂಸ್ಥೆಗಳಲ್ಲಿ ಶುದ್ಧೀಕರಿಸಿದ ಮದ್ಯದ ತಯಾರಿಕೆ ಮತ್ತು ಮಾರಾಟಕ್ಕಾಗಿ ಹೆಚ್ಚು ವೆಚ್ಚ ಉಂಟಾದರಿಂದ ರೂ. 153.92 ಲಕ್ಷ ರೂಗಳ ಹೆಚ್ಚುವರಿ ಮೊಬಲಗಿನ ಅವಶ್ಯಕತೆಯಿದೆ. ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಒದಗಿಸಿಲ್ಲವಾದ್ದರಿಂದ ಈ ಹೆಚ್ಚುವರಿ ಮೊಬಲಗನ್ನು ಬೇಡಿಕೆಯಲ್ಲಿ ಸೇರಿಸಿದೆ.

ಅಭಿಯಾಚನೆಯ ಕ್ರಮಾಂಕ 26

ಸಾರಿಗೆ ಸೇವೆಗಳು

(ಲಕ್ಷ ರೂ.ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	3870.00	3870.00
		ಬಂಡವಾಳ	...	1638.00	1638.00
	ಪೂರಕ	ರಾಜಸ್ವ	...	3500.00	3500.00
		ಬಂಡವಾಳ	...	...	...

1994-1995...ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು.

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	21.25	21.25
ಬಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ ಒಳ ಮತ್ತು	ವಿವರಣಾ ಶೀರ್ಷಿಕೆ	ಪ್ರಭೃತ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
3055-ರಸ್ತೆ ಸಾರಿಗೆ	190-ಸಾರ್ವಜನಿಕ ಮತ್ತು ಇತರ ಉದ್ದಿಮೆಗಳಿಗೆ ಸಹಾಯ	02-ಅಂತರರಾಜ್ಯ ಸಾರಿಗೆ ಒಪ್ಪಂದದ ವೆಚ್ಚವನ್ನು ಮರು ಪಾವತಿಸುವಬಗ್ಗೆ		-	21.25
		ಒಟ್ಟು		-	21.25

ವಿವರಣಾತ್ಮಕ ಟಿಪ್ಪಣಿ

ಅಂತರ ರಾಜ್ಯ ಸಾರಿಗೆ ಒಪ್ಪಂದಗಳನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸಿದ ವೆಚ್ಚವನ್ನು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯವರು ಸರ್ಕಾರದ ಪರವಾಗಿ ಭರಿಸಿರುವುದರಿಂದ ರೂ. 21.25 ಲಕ್ಷಗಳನ್ನು ಮರುಪಾವತಿಸಬೇಕಾಗಿರುತ್ತದೆ. ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ ಅವಕಾಶ ಮಾಡದಿರುವುದರಿಂದ, ಬೇಕಾದ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯಿಂದ ಬಾಕಿ ಇರುವ ಮೋಟಾರು ವಾಹನ ತೆರಿಗೆಗೆ ಈ ಎಲ್ಲಾ ಮೊತ್ತವನ್ನು ಹೊಂದಾಣಿಕೆ ಮಾಡುವುದರಿಂದ, ನಗದು ಈ ಪ್ರಕರಣದಲ್ಲಿ ಹೊರಹೋಗುವುದಿಲ್ಲ.

ಅಭಿಯಾಚನೆಯ ಕ್ರಮಾಂಕ-28

ಬಂದೀಖಾನೆ, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಮುಂತಾದವು

(ಲಕ್ಷ ರೂಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	0.01	3127.49	3127.50
		ಬಂಡವಾಳ	...	...	...
	ಪೂರಕ	ರಾಜಸ	...	25.00	25.00
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಬಜಸ್ವ	...	100.00	100.00
ಂಡವಾಳ	...	...	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಇಲಾಖೆ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2235-ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ	200-ಇತರೆ ಕಾರ್ಯ ಕ್ರಮಗಳು	1- ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ			

1	2	3	4	5	6
60- ಇತರೆ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಕಾರ್ಯಕ್ರಮ		03-ಎರಡನೇ ವಿಶ್ವ ಯುದ್ಧದಲ್ಲಿ ಮಡಿದ ಶೂರರಿಗೆ/ಶೂರರ ವಿಧವೆಯರಿಗೆ ಪಿಂಚಣಿ		...	100.00
			ಒಟ್ಟು	...	100.00

ವಿವರಣಾತ್ಮಕ ಟಿಪ್ಪಣಿ

ಎರಡನೇ ವಿಶ್ವ ಯುದ್ಧದಲ್ಲಿ ಹೋರಾಡಿದ ಶೂರರಿಗೆ/ಮಡಿದ ಯೋಧರ ವಿಧವೆಯರಿಗೆ ಪಿಂಚಣಿ ನೀಡುವುದಕ್ಕಾಗಿ ರೂ. 100.00 ಲಕ್ಷಗಳನ್ನು ಒದಗಿಸಲಾಗಿದೆ. ಆಯವ್ಯಯದಲ್ಲಿ ಒದಗಿಸಲಾದ ಮೊತ್ತವು ಸಾಕಾಗದಿದ್ದರಿಂದ ಈ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಿದೆ.

ಅಭಿಯಾಚನೆಯ ಕ್ರಮಾಂಕ 29
ವಾರ್ತಾ ಮತ್ತು ಪ್ರಚಾರ

(ಲಕ್ಷ ರೂಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	-	988.71	988.71
		ಬಂಡವಾಳ	-	20.00	20.00
	ಪೂರಕ	ರಾಜಸ್ವ	-	65.00	65.00
		ಬಂಡವಾಳ	-	25.00	25.00

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

		ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	364.98	364.98
ಬಂಡವಾಳ	...	...	-	...

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಬಾಬು ಸಂಖ್ಯೆ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2220-ವಾರ್ತಾ ಮತ್ತು ಪ್ರಚಾರ 01-ಚಲನ ಚಿತ್ರಗಳು	800-ಇತರೆ ವೆಚ್ಚಗಳು	01-ಚಲನ ಚಿತ್ರೋದ್ಯಮದ ಅಭಿವೃದ್ಧಿ 060-ಇತರೆ ವೆಚ್ಚಗಳು	1	...	10.75
101-ಜಾಹಿರಾತು		106-ಸಹಾಯಧನ	2	100.00	...
	ಮತ್ತು ವಿಕ್ಷಣ ಪ್ರಚಾರ	02-ವಾಣಿಜ್ಯ ಪ್ರಚಾರ 091-ಜಾಹಿರಾತು, ಮಾರಾಟ ಮತ್ತು ಪ್ರಚಾರ	3	...	200.00
	103-ಪತ್ರಿಕಾ ಸಮಾಚಾರ ಸೇವೆಗಳು	01-ಪತ್ರಿಕೆ ಮತ್ತು ವಾರ್ತಾ ಸೇವೆಗಳು 050-ಕಛೇರಿ ವೆಚ್ಚಗಳು	4	...	49.48
	800-ಇತರೆ ವೆಚ್ಚಗಳು	04-ಕರ್ನಾಟಕ ಪ್ರೆಸ್ ಅಕಾಡೆಮಿ	5	...	4.75
			ಒಟ್ಟು	100.00	264.98

ವಿವರಣಾತ್ಮಕ ಟಿಪ್ಪಣಿ

ಬಾಬು ಸಂಖ್ಯೆ 1 :- 1993-94ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ವಿತರಣಾ ಸಮಾರಂಭದ ಸಲುವಾಗಿ ಮತ್ತು ರಾಜ್ಯದ ಕಲಾವಿದರಿಗೆ ವೈದ್ಯಕೀಯ ವೆಚ್ಚವನ್ನು ಭರಿಸಲು ಅಧಿಕ ಮೊತ್ತದ ಅವಶ್ಯಕತೆ ಇದೆ.

ಬಾಬು ಸಂಖ್ಯೆ 2:- 1993-94 ಮತ್ತು 1994-95ನೇ ಸಾಲಿನಲ್ಲಿ ಬಾಕಿ ಇರುವ ಚಲನಚಿತ್ರಗಳಿಗೆ ಸಹಾಯ ಧನವನ್ನು ಪಾವತಿಸಲು ರೂ. 100.00 ಲಕ್ಷದ ಅವಶ್ಯಕತೆ ಇದೆ.

ಬಾಬು ಸಂಖ್ಯೆ 3:- ಸರ್ಕಾರದ ಎಲ್ಲಾ ಇಲಾಖೆಗಳ ಸಾಧನೆಗಳ ಬಗ್ಗೆ ಜಾಹೀರಾತುಗಳಿಗಾಗಿ ಹೆಚ್ಚುವರಿ ಮೊತ್ತಕ್ಕಾಗಿ ರೂ. 200 ಲಕ್ಷವನ್ನು ಬೇಡಿಕೆಯಲ್ಲಿ ಸೇರಿಸಿದೆ.

ಬಾಬು ಸಂಖ್ಯೆ 4:- ಸಾಮಾನ್ಯ ಚುನಾವಣೆಗಾಗಿ ವಾರ್ತಾ ಕೇಂದ್ರಗಳನ್ನು ಸ್ಥಾಪಿಸಿದ್ದು, ಮತ್ತು 1-10-1991 ರಿಂದ ಪಿ.ಟಿ.ಐ. ಮತ್ತು ಯು.ಎನ್.ಐ.ಗೆ ಪರಿಷ್ಕೃತ ಕಾಣಿಕೆ ದರ ಪಾವತಿಸಬೇಕಾಗಿದೆ. ಆದ್ದರಿಂದ ಹೆಚ್ಚುವರಿ ಹಣದ ಅವಶ್ಯಕತೆ ಇದೆ.

ಬಾಬು ಸಂಖ್ಯೆ 5:- ರೂ. 475 ಲಕ್ಷಗಳನ್ನು ಕರ್ನಾಟಕ ಪ್ರೆಸ್ ಅಕಾಡೆಮಿಗೆ ಹೆಚ್ಚುವರಿ ಅನುದಾನವಾಗಿ ಬಿಡುಗಡೆ ಮಾಡಿದೆ. ಆಯವ್ಯಯದಲ್ಲಿ ಅವಕಾಶವನ್ನು ಮಾಡಲಾಗಿದ್ದು, ಇದು ಸಾಕಾಗದಿದ್ದುದರಿಂದ ಉಳಿದ ಹಣವನ್ನು ಬೇಡಿಕೆಯಲ್ಲಿ ಸೇರಿಸಿದೆ.

ಅಭಿಯಾಚನೆಯ ಕ್ರಮಾಂಕ 30

ಪ್ರವಾಸೋದ್ಯಮ

(ಲಕ್ಷ ರೂ.ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	...	1050.57	1050.57
		ಬಂಡವಾಳ	...	10.00	10.00
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೇಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	...	...
ಬಂಡವಾಳ	...	10.00	10.00

ಪ್ರಧಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಪ್ರಭೃತ	ಹಣದ ಅಗತ್ಯತೆ (ಲಕ್ಷ ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
7452-ಪ್ರವಾಸೋದ್ಯಮಕ್ಕೆ ಸಾಲಗಳು	190-ಸಾರ್ವಜನಿಕ ವಲಯ	1. ಕರ್ನಾಟಕ ರಾಜ್ಯ ಪ್ರವಾಸೋದ್ಯಮ			

1	2	3	4	5	6
		ನಿಗಮಕ್ಕೆ ಸಾಲಗಳು		10.00	...
01-ಪ್ರವಾಸೋದ್ಯಮಕ್ಕೆ ಮೂಲ ಸೌಕರ್ಯಗಳು.	ಮತ್ತು ಇತರ ಉದ್ಯಮಗಳಿಗೆ ಸಾಲಗಳು				
			ಒಟ್ಟು	10.00	...

ವಿವರಣಾತ್ಮಕ ಟಿಪ್ಪಣಿ

ಪ್ರವಾಸೋದ್ಯಮಕ್ಕೆ ಮೂಲಸೌಕರ್ಯಗಳನ್ನು ಒದಗಿಸುವ ಸಲುವಾಗಿ ರೂ. 10.00 ಲಕ್ಷದ ಅವಶ್ಯಕತೆಯಿದೆ. ಈ ಮೊತ್ತವನ್ನು ಸಾಲದ ರೂಪವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮಕ್ಕೆ ನೀಡಲಾಗುವುದು. ಇಷ್ಟೇ ಮೊತ್ತವನ್ನು ರಾಜಸ್ವದಿಂದ ಅಧ್ಯರ್ಪಣೆ ಮಾಡಲಾಗುವುದು, ಆದ್ದರಿಂದ ಈ ಪ್ರಕರಣದಲ್ಲಿ ಒಟ್ಟು ನಗದು ಹಣ ಹೊರ ಹೋಗುವುದಿಲ್ಲ.

ಅಭಿಯಾಚನೆಯ ಕ್ರಮಾಂಕ 31

ವೈದ್ಯಕೀಯ ಶಿಕ್ಷಣ

(ಲಕ್ಷ ರೂ.ಗಳಲ್ಲಿ)

			ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ಅನುದಾನ	ಮೂಲ	ರಾಜಸ್ವ	0.05	11270.75	11270.80
		ಬಂಡವಾಳ	...	...	...
	ಪೂರಕ	ರಾಜಸ್ವ	...	...	...
		ಬಂಡವಾಳ	...	...	...

1994-95ನೆಯ ಸಾಲಿನ ಹಣದ ಅಗತ್ಯತೆಯ ಪೂರಕ ಅಂದಾಜು

	ಪ್ರಭೃತ ರೂ.	ಪುರಸ್ಕೃತ ರೂ.	ಒಟ್ಟು ರೂ.
ರಾಜಸ್ವ	...	120.00	120.00
ಬಂಡವಾಳ	...	...	...

ಪ್ರದಾನ ಶೀರ್ಷಿಕೆ	ಉಪ ಶೀರ್ಷಿಕೆ	ಒಳ ಮತ್ತು ವಿವರಣಾ ಶೀರ್ಷಿಕೆ	ಬಾಬ್ತು ಸಂಖ್ಯೆ	ಹಣದ ಅಗತ್ಯತೆ ಲಕ್ಷ (ರೂಪಾಯಿಗಳಲ್ಲಿ) ಯೋಜನೆ	ಯೋಜನೇತರ
1	2	3	4	5	6
2210-ವೈದ್ಯಕೀಯ ಮತ್ತು ಜನಾರೋಗ್ಯ	110 ಆಸ್ಪತ್ರೆಗಳು ಮತ್ತು ಔಪ ಧಾಲಯಗಳು	1. ಶಿಕ್ಷಣ ಸಂಸ್ಥೆಗಳಿಗೆ ಲಗತ್ತಾದ ಆಸ್ಪತ್ರೆಗಳು			
		01. ಕಾಲೇಜು ಆಸ್ಪತ್ರೆಗಳು ಬೆಂಗಳೂರು			
		222. ಔಪಧ ಮತ್ತು ರಸಾಯನಿಕಗಳು	1	...	30.00
01 ನಗರ ಆರೋಗ್ಯ ಸೇವೆಗಳು ಅಲೋಪತಿ		234. ಪಥ್ಯಾಹಾರ ವೆಚ್ಚ	2	...	6.40
		313. ಸಾಧನ ಸಾಮಗ್ರಿ ಮತ್ತು ಸಲಕರಣಗಳು	3	...	2.57
		02. ಬೌರಿಂಗ್ ಮತ್ತು ಲೇಡಿ ಕರ್ಜನ್			
		222. ಔಪದ ಮತ್ತು ರಸಾಯನಿಕಗಳು	4	...	26.00
		313. ಸಾಧನ ಸಾಮಗ್ರಿ ಮತ್ತು ಸಲಕರಣೆಗಳು	5	...	0.71
		50. ಕರ್ನಾಟಕ ಮೆಡಿಕಲ್ ಆಸ್ಪತ್ರೆ, ಹುಬ್ಬಳ್ಳಿ			
		222. ಔಪದ ಮತ್ತು ರಸಾಯನಿಕಗಳು	6	...	17.00
		234. ಪಥ್ಯಾಹಾರ ವೆಚ್ಚ	7	...	1.45
		313. ಸಾಧನ ಸಾಮಗ್ರಿ			

1	2	3	4	5	6
		313. ಸಾಧನ ಸಾಮಗ್ರಿ ಮತ್ತು ಸಲಕರಣೆಗಳು	8	...	2.00
		09. ಚಿಗಟೇರಿ ಜನರಲ್ ಆಸ್ಪತ್ರೆ			
		222. ಔಷದ ಮತ್ತು ರಸಾಯನಿಕಗಳ್ಳು	9	...	7.65
		234. ಪಥ್ಯಾಹಾರ ವೆಚ್ಚ	10	...	1.50
		313. ಸಾಧನ ಸಾಮಗ್ರಿ ಮತ್ತು ಸಲಕರಣಗಳು	11	...	4.72
